# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY



ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038






ಸಂಪುಟ:02 • ಸಂಚಿಕೆ: 41 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 07.08.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 41 • PRGI No:KARKAN/2023/88055 • VIJAYANAGARA • 07.08.2024 • Wednesday • Page:04 • Rs:2





# ನರೇಗಾ ಕೂಲಿ ಪಾವತಿಗೆ ಆಗ್ರಹ

## 2 ತಿಂಗಳಿಂದ ನರೇಗಾ ಕೂಲಿಗಾಗಿ ಕಾರ್ಮಿಕರ ಅಲೆದಾಟ



■ **ಹಂಪಿ ಟೈಮ್ಸ್ ಹೊಸಪೇಟೆ**

ನರೇಗಾ ಕೂಲಿ 15 ದಿನದೊಳಗೆ ನೀಡಬೇಕೆಂಬ ನಿಯಮವಿದ್ದರೂ, ಕಾರ್ಮಿಕರಿಗೆ 2 ತಿಂಗಳಾದರೂ ಕೂಲಿ ನಿಡಿಲ್ಲ. ಕೇಂದ್ರ ಸರ್ಕಾರ ಕೂಡಲೇ ನರೇಗಾ ಕಾರ್ಮಿಕರಿಗೆ ನ್ಯಾಯ ಒದಗಿಸಿ, ನರೇಗಾ ಸಮರ್ಪಕ ಅನುಷ್ಠಾನಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಮಂಗಳವಾರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ ಒತ್ತಾಯಿಸಿತು.

ಸಂಘಟನೆಯ ಎನ್.ಹುಲಿಗೆಮ್ಮ ಮಾತನಾಡಿ, ಕಾರ್ಮಿಕರಿಗೆ ನಾನಾ ಕಾರಣಗಳ ನೆಪವೊಡ್ಡಿ ವೇತನ ಪಾವತಿಗೆ ಅಲೆದಾಡಿಸುತ್ತಿದ್ದಾರೆ. ಜಾಬ್‌ಕಾರ್ಡ್ ಸಹ ನೀಡುತ್ತಿಲ್ಲ. ನರೇಗಾ ಕಾರ್ಮಿಕರ ಅಗತ್ಯ ಮಾಹಿತಿಗಳ ತಿದ್ದುಪಡಿಗೆ ಜಿಲ್ಲಾ ಪಂಚಾಯಿತಿಗೆ ಅಧಿಕಾರಿ ನೀಡಬೇಕು. ಕೆಲಸದ ಅವಧಿಯನ್ನು ನಾಲ್ಕು ಗಂಟೆಯ ಬದಲಿಗೆ ಮೂರು ಗಂಟೆಗೆ ಇಳಿಸಬೇಕು. ಕೆಲಸದ ವೇಳೆ ಮರಣ ಹೊಂದಿದ ಕಾರ್ಮಿಕರಿಗೆ 5 ಲಕ್ಷ ರೂಗೆ ಪರಿಹಾರ ಹೆಚ್ಚಿಸಬೇಕು. ನರೇಗಾ ಕಾರ್ಮಿಕರನ್ನು ಕಟ್ಟಡ ಕಾರ್ಮಿಕರೆಂದು ಪರಿಗಣಿಸಿ ಕಟ್ಟಡ ಕಾರ್ಮಿಕರ ಕಾರ್ಡ್‌ನ್ನು ನೀಡಲು ಅವಕಾಶ ಕಲ್ಪಿಸಬೇಕು. ಮೇಟಿಗಳಿಗೆ ವಿದ್ಯಾರ್ಹತೆಯನ್ನು ಕಡ್ಡಾಯಗೊಳಿಸಬಾರದು ಎಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

ಜಿಲ್ಲಾ ಕಾರ್ಯಕರ್ತರು ಶೈನಾಜ್. ಕಾರ್ಯಕರ್ತರಾದ ಮಂಜುಳಾ, ಕೊಟ್ರಮ್ಮ, ಶೃತಿ ಭಾಗ್ಯ, ಪುಷ್ಪವತಿ, ಲಲಿತಾ, ನೀಲಮ್ಮ, ಇಲಾಜ್, ಶಬ್ಬೀರಬಾಷಾ ನೀಲಪ್ಪ, ಸೋಮಶೇಖರ್, ನಾಗರಾಜ್, ಕುಮಾರಸ್ವಾಮಿ. ಬಸವರಾಜ್, ಗಾಳೆಪ್ಪ, ಈರಮ್ಮ, ಶರಣ, ಪರಶುರಾಮ, ಜಲಾಲಿ, ಹೇಮಾವತಿ, ಹುಲುಗಪ್ಪ, ಇತರರು ಭಾಗವಹಿಸಿದ್ದರು.

# ಹಂಪಾಪಟ್ಟಣ ಸಮಸ್ಯೆಗಳನ್ನು ಪರಿಹಾರ ಕಂಡುಕೊಳ್ಳೋಣ

## ಗ್ರಾ.ಪಂ.ಅಧ್ಯಕ್ಷ ನಾಗರಾಜ್ ಗ್ರಾಮಸಭೆಯಲ್ಲಿ ಕರೆ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ಹಂಪಾಪಟ್ಟಣ ಗ್ರಾ.ಪಂ. ಹಳೇ ಕಟ್ಟಡದ ಆವರಣದಲ್ಲಿ, ಗ್ರಾ.ಪಂ. ಅಧ್ಯಕ್ಷ ನಾಗರಾಜ್ ಅಧ್ಯಕ್ಷತೆಯಲ್ಲಿ ಸೋಮವಾರ ಉದ್ಯೋಗ ಖಾತ್ರಿ ಯೋಜನೆಯ ಕ್ರೀಯಾ ಯೋಜನೆಯ ಗ್ರಾಮಸಭೆ ಜರುಗಿತು.

ಸಭೆಯಲ್ಲಿ ಗ್ರಾ.ಪಂ.ವ್ಯಾಪ್ತಿಯ ಗ್ರಾಮಗಳ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ನಾಗರಾಜ್ ಮಾತನಾಡಿ, ಸುತ್ತಮುತ್ತಲಿನ ಗ್ರಾಮಗಳನ್ನೊಳಗೊಂಡ ಗ್ರಾ.ಪಂ.ಯು ಪ್ರಮುಖವಾಗಿ ಕುಡಿಯುವ ನೀರು ಸೇರಿದಂತೆ ಸ್ವಚ್ಛತೆಯ ಕಡೆ ಗಮನ ಹರಿಸಬೇಕು. ಆಯಾ ಗ್ರಾಮಗಳ ಸಮಸ್ಯೆಗಳನ್ನು ಸಾರ್ವಜನಿಕರಲ್ಲದೆ, ಸದಸ್ಯರೂ ಕೂಡ ಗ್ರಾ.ಪಂ.ಯ ಗಮನಕ್ಕೆ ತರಬೇಕು. ನಾವು ನೀವು ಸೇರಿ ಅಧಿಕಾರಿಗಳೊಂದಿಗೆ ಕೆಲಸ ತೆಗೆದುಕೊಳ್ಳೋಣ. ಇಲ್ಲಿಯ ಪ್ರಥಮಿಕ ಆರೋಗ್ಯ ಕೇಂದ್ರದಲ್ಲಿ ನಿರಂತರ ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಕಾಡುತ್ತಿದೆ. ಈ ಬಗ್ಗೆ ತಾಲೂಕು ವೈದ್ಯಾಧಿಕಾರಿಗಳು ಗಮನ ತರುತ್ತೇವೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಇಲ್ಲಿಯ ತಿಗಳನ ಕೆರೆಯಿಂದ ಭೀಮನಕೆರೆಯವರೆಗೂ ಕೆರೆ ಕಾಲೂವೆಯ ಅಭಿವೃದ್ಧಿ ಕೆಲಸವನ್ನು ಮಾಡುವುದು. ಇನ್ನೂ ಅನೇಕ ಕೆಲಸಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ವೈಯಕ್ತಿಕ ಕಾಮಗಾರಿಗಳು ಸೇರಿದಂತೆ ಸಾರ್ವಜನಿಕರು ಅರ್ಜಿ ಸಲ್ಲಿಸುವ ಮೂಲಕ ಸೌಲಭ್ಯವನ್ನು ಸಬ್ಧಳಕೆ ಮಾಡಿಕೊಳ್ಳಿ ಎಂದು ಕರೆ ನೀಡಿದರು.

ಈ ವೇಳೆ ಗ್ರಾ.ಪಂ.ಯ ಉಪಾಧ್ಯಕ್ಷೆ ಹನುಮಕ್ಕ, ಸದಸ್ಯ ಟಿ.ಮಂಜುನಾಥ, ಸಿಎಲ್.ಕುಮಾರ, ಎಸ್.ಗಾಳೆಪ್ಪ, ಎನ್.ನಾಗರಾಜ್, ಉಪ್ಪಾರ್ ಹುಲಿಗೆಮ್ಮ, ಬಿ.ಎಫ್‌ಟಿ ಮೈಲಪ್ಪ, ರೇಷ್ಮೆ ಇಲಾಖೆ ಅಧಿಕಾರಿ ಹಾಲಪ್ಪ, ಇಂಜಿನಿಯರ್ ಗಿರೀಶ್ ಹಾಗೂ ಅರ್ಚನ, ಗ್ರಾ.ಪಂ.ಪಿಡಿಒ ನಾಗರತ್ನಮ್ಮ, ಕಾರ್ಯದರ್ಶಿ ಶಂಕರ್‌ಗೌಡ, ತೆರಿಗೆ ಸಂಗ್ರಾಹಕ ಎ.ಚರಂತ್, ಸಿಬ್ಬಂದಿ ನಿಂಗರಾಜ್, ಸಹಾಯಕ ಬಂಧು ಹನುಮಕ್ಕ ಹಾಗೂ ಗ್ರಾ.ಪಂ.ವ್ಯಾಪ್ತಿಯ ಮುಖಂಡರು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.

**ಮೈಕ್ರೋ ನ್ಯೂಸ್**

## ಆಗಸ್ಟ್ 7 ರಿಂದ ಲೋಕಾಯುಕ್ತ ಜನ ಸಂಪರ್ಕ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದಿಂದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಆಗಸ್ಟ್ 7ರಿಂದ ಜಿಲ್ಲೆಯ ವಿವಿಧೆಡೆ ಲೋಕಾಯುಕ್ತ ಜನ ಸಂಪರ್ಕ ಸಭೆಗಳು ನಡೆಯಲಿವೆ.

ಆಗಸ್ಟ್ 7 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಕೊಟ್ಟೂರು ತಾಲೂಕು ಕಚೇರಿ ಸಭಾಂಗಣದಲ್ಲಿ, ಆಗಸ್ಟ್ 13ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಕೂಡ್ಲಿಗಿ ತಾಲೂಕು ಕಚೇರಿ ಸಭಾಂಗಣದಲ್ಲಿ, ಆಗಸ್ಟ್ 21ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಹರಪನಹಳ್ಳಿ ತಾಲೂಕು ಕಚೇರಿ ಸಭಾಂಗಣದಲ್ಲಿ ಸಭೆಗಳು ನಡೆಯಲಿದ್ದು, ಸಾರ್ವಜನಿಕರು ತಮ್ಮ ಕುಂದುಕೊರತೆಗಳು, ಅಹವಾಲುಗಳು ಹಾಗೂ ತಮ್ಮ ಸರಕಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬತೆ, ಕಿರುಕುಳ, ತೊಂದರೆ ಮತ್ತು ಅಧಿಕಾರಿ ಸಿಬ್ಬಂದಿಯ ದುರಾಡಳಿತಕ್ಕೆ ಸಂಬಂಧಿಸಿದ ದೂರುಗಳನ್ನು ಸಂಬಂಧಿಸಿದ ತಾಲೂಕುಗಳಲ್ಲಿ ಆಯಾ ದಿನಾಂಕದಂದು ದ್ವಿಪ್ರತಿಯಲ್ಲಿ ದೂರ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

# ಉಜ್ಜಯಿನಿ ಪುಣ್ಯ ಪುರುಷರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರು ಅರಿತಿರಬೇಕು

## ಜಗದ್ಗುರು ಶ್ರೀ ಸಿದ್ದಲಿಂಗರಾಜ ದೇಶಿ ಕೇಂದ್ರ ಶಿವಾಚಾರ್ಯ ಮಹಾ ಸ್ವಾಮೀಜಿಗಳ ಹೇಳಿಕೆ



■ **ಹಂಪಿ ಟೈಮ್ಸ್ ಕೊಟ್ಟೂರು**

ಉಜ್ಜಯಿನಿ ಪುಣ್ಯ ಪುರುಷರ, ಮಹಾತ್ಮರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು ಎಂದು ಉಜ್ಜಿನಿ ಸದ್ಧರ್ಮಪೀಠದ ಜಗದ್ಗುರು ಶ್ರೀ ಸಿದ್ದಲಿಂಗರಾಜ ದೇಶಿ ಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿಗಳು ಹೇಳಿದರು.

ತಾಲೂಕಿನ ಸದ್ಧರ್ಮ ಪೀಠದಲ್ಲಿ ಸೋಮವಾರ ನಡೆದ ಮಹಾತಪಸ್ವಿ ಪವಾಡ ಪುರುಷ ಲಿಂ. ಶ್ರೀ ಸಿದ್ದಲಿಂಗ ಜಗದ್ಗುರುಗಳವರ ಪುಣ್ಯ ಸ್ಮರಣೆ ಹಾಗೂ ಶ್ರಾವಣ ಮಾಸದ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು.

ಲಿಂ.ಶ್ರೀ ಸಿದ್ದಲಿಂಗ ಜಗದ್ಗುರುಗಳವರ ಪವಾಡಗಳು ಒಂದಲ್ಲ ಎರಡಲ್ಲ ಅನೇಕ ಪವಾಡಗಳನ್ನು ಮಾಡಿ, ಪವಾಡ ಪುರುಷ ಮಹಾ ತಪಸ್ವಿಗಳಾದರು. ಅವರ ಆಶೀರ್ವಾದ ಪಡೆದ ಭಕ್ತರು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು.

ಸಮಾಜದಲ್ಲಿ ಗುರು ಹಿರಿಯರಿಗೆ ತಂದೆ ತಾಯಿಗಳಿಗೆ ಗೌರವ ಕೊಡುವ ಗುಣ ಪ್ರತಿಯೊಬ್ಬರಲ್ಲಿ ಬೆಳೆಯಬೇಕು. ಮಳೆರಾಯನ ಕೃಪೆ ಈ ಬಾರಿ ಉತ್ತಮವಾಗಿ ಸಿಗಲಿದೆ ಎಂದು ಆಶೀರ್ವಚನ ನೀಡಿದರು.

ಕಾರಟಗಿ ತಾಲ್ಲೂಕಿನ ಸೋಮನಾಳ ಗ್ರಾಮ ಸಿದ್ದರಾಮಯ್ಯ ಶಾಸ್ತ್ರೀ ಸೋಮನಾಳ ಕಾರಟಗಿ ತಾಲ್ಲೂಕು. ಸಿದ್ದರಾಮಯ್ಯ ಶಾಸ್ತ್ರೀ ಪುರಾಣ ಪ್ರವಚನ ಮಾಡಿದರು.

ಗ್ರಾಮದ ಮುಖಂಡ ಎ.ಎಂ. ಚನ್ನವೀರಸ್ವಾಮಿ, ಯು.ಎಂ. ಸಿದ್ದಲಿಂಗಯ್ಯ ಶಾಸ್ತ್ರೀ, ವಕೀಲ ಕೊಟ್ರಯ್ಯ, ಎ. ಪುಷ್ಪವಾತಿ ರೇವಣ್ಣಸಿದ್ದಪ್ಪ, ಸಣ್ಣರಂಗಪ್ಪ, ಕುರುಗೋಡು ಸಿದ್ದೇಶ್, ಮಂಜು. ಹರಪನಹಳ್ಳಿ ಗುರುಸಿದ್ದಯ್ಯ ಸೇರಿದಂತೆ ಅನೇಕ ಭಕ್ತರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಆ. 5ರಿಂದ ಸೆ. 4ರವರಗೆ ಶ್ರಾವಣ ಮಾಸದ ಪೂಜಾ ಅನುಷ್ಟಾನ ನೆರವೇರಲಿದೆ.

## 2 ದಿನ ದೇವಸ್ಥಾನಗಳಲ್ಲಿ ದೀಪಾಲಂಕಾರ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಹಿಂದೂ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಧಾರ್ಮಿಕ ಸಂಸ್ಥೆಗಳು ಹಾಗೂ ದೇವಸ್ಥಾನಗಳಲ್ಲಿ ಆ.14 ಮತ್ತು ಆ.15ರಂದು ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಹಾಗೂ ಆ.15ರಂದು ವಿಶೇಷ ಪೂಜೆ, ಪ್ರಾರ್ಥನೆ ವ್ಯವಸ್ಥೆ ಕೈಗೊಳ್ಳಬೇಕು ಹಿಂದೂ ಧಾರ್ಮಿಕ ದತ್ತಿಗಳ ಇಲಾಖೆಯ ಸಹಾಯಕ ಆಯುಕ್ತ ಗಂಗಾಧರಪ್ಪ ತಿಳಿಸಿದ್ದಾರೆ.






## ಆರೋಗ್ಯ ಇಲಾಖೆ: ವಿವಿಧ ಹುದ್ದೆಗಳಿಗೆ ಆಕ್ಷೇಪಣೆ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಿಂದ ಜುಲೈ 20ರಂದು ರಾಷ್ಟೀಯ ಆರೋಗ್ಯ ಅಭಿಯಾನದ ಯೋಜನೆ ಅಡಿಯಲ್ಲಿ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು.

ಲೆಕ್ಕ ಪತ್ರ ವ್ಯವಸ್ಥಾಪಕರು (ಎಫ್.ಎಂ.ಜಿ), ಪಿ.ಹೆಚ್.ಸಿ.ಓ (ಎ.ಎನ್.ಎಂ) ಹುದ್ದೆಗಳ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿ, ಕಾಯ್ದಿರಿಸಿದ ಆಯ್ಕೆಪಟ್ಟಿ ಹಾಗೂ ತಿರಸ್ಕೃತ ಪಟ್ಟಿಗಳನ್ನು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದಾದರು ಆಕ್ಷೆಪಣೆಗಳಿದ್ದಲ್ಲಿ ಆಗಸ್ಟ್ 13 ಸಂಜೆ 5.30ರೊಳಗಾಗಿ ಲಿಖಿತ ರೂಪದಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸಂಘದ ಉಪಾಧ್ಯಾಕ್ಷರು ತಿಳಿಸಿದ್ದಾರೆ.

## ಫಿಜಿಯೋಥೆರಪಿಸ್ಟ್, ಆಯಾ ಹುದ್ದೆಗಳಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನಲ್ಲಿ ಸಮನ್ವಯ ಶಿಕ್ಷಣ ಮದ್ಯವರ್ತನೆಯ ಕಾರ್ಯಚಟುವಟಿಕೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊಸಪೇಟೆ ತಾಲ್ಲೂಕಿನಲ್ಲಿ ವಿಕಲ ಚೇತನ ಮಕ್ಕಳಿಗೆ ಫಿಜಿಯೋಥೆರಪಿ ಮತ್ತು ಆಯಾ ಹುದ್ದೆಗೆ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹತೆಗಳು: ಫಿಜಿಯೋಥೆರಪಿಸ್ಟ್ ಹುದ್ದೆಗೆ ಬ್ಯಾಚುಲರ್ ಆಫ್ ಫಿಜಿಯೋಥೆರಪಿ ಅಥವಾ ಡಿಪ್ಲೋಮಾ ಇನ್ ಫಿಜಿಯೋಥೆರಪಿಯಲ್ಲಿ ಪದವಿ ಪಡೆದಿರಬೇಕು. ಆಯಾ ಹುದ್ದೆಗೆ ಕನಿಷ್ಠ 7ನೇತರಗತಿ ಉತ್ತೀರ್ಣರಾಗಿರಬೇಕು. ಆಸಕ್ತರು ಆಗಸ್ಟ್ 7ರೊಳಗೆ ಹೊಸಪೇಟೆಯ ಕ್ಷೇತ್ರ ಸಂಪನ್ಮೂಲ ಕೇಂದ್ರ (ಬಿ.ಆರ್.ಸಿ)ದಲ್ಲಿ ಅರ್ಜಿ ಖುದ್ದಾಗಿ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಅಂಚೆಯ ಮೂಲಕ ಸಲ್ಲಿಸಲು ಅವಕಾಶ ಇರುವುದಿಲ್ಲ. ಆಗಸ್ಟ್ 8ರಂದು ಹೊಸಪೇಟೆಯ ಬಿ.ಆರ್.ಸಿ. ಕೇಂದ್ರದಲ್ಲಿ ಸಂದರ್ಶನಕ್ಕೆ ಹಾಜರಾಗತಕ್ಕದ್ದು. ಸಂದರ್ಶನದ ಭೇಟಿಗೆ ಯಾವುದೇ ಸಾರಿಗೆ ಭತ್ಯೆ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಮೊ.ನಂ: 9480695078ಗೆ ಸಂಪರ್ಕಿಸಬಹುದು ಎಂದು ಹೊಸಪೇಟೆಯ ಕ್ಷೇತ್ರ ಸಮನ್ವಯಾಧಿಕಾರಿಗಳ ತಿಳಿಸಿದ್ದಾರೆ.




## ವಿಜ್ಞಾನ

# ರಾತ್ರಿ ವೇಳೆ ಪತಂಗಗಳು ಏಕೆ ಬೆಳಕಿಗೆ ಆಕರ್ಷಿತವಾಗುತ್ತವೆ?

■ ಆರ್.ಬಿ.ಗುರುಬಸವರಾಜ

ರಾಜು ರಾತ್ರಿ ಊಟದ ನಂತರ ತಾಯಿಯ ಜೊತೆಗೆ ವಾಕ್ ಮಾಡಲು ಹೊರಟ. ಬೀದಿ ದೀಪದ ಬಳಿ ಅನೇಕ ಪತಂಗಗಳು ಗಿರಕಿ ಹೊಡೆಯುವುದನ್ನು ಕಂಡ. "ಅಮ್ಮ ಬಲ್ಬ್‌ನ ಬಳಿ ಯಾಕೆ ಅಷ್ಟೊಂದು ಪತಂಗಗಳು ಸೇರಿವೆ?" ಎಂದ. 'ಅವು ಬಲ್ಬ್‌ನ ಬೆಳಕಿಗೆ ಆಕರ್ಷಿತಗೊಂಡು ಇಲ್ಲಿ ಜಮಾವಣೆ ಆಗಿವೆ' ಎಂದಳು ತಾಯಿ. "ಪತಂಗಗಳು ಏಕೆ ಬೆಳಕಿಗೆ ಆಕರ್ಷಿತವಾಗುತ್ತವೆ?" ಎಂದು ಮತ್ತೊಂದು ಪ್ರಶ್ನೆ ಕೇಳಿದ. ಇದನ್ನು ನಿರೀಕ್ಷಿಸಿದ್ದ ತಾಯಿ ಈ ಬಗ್ಗೆ ವಿವರಿಸತೊಡಗಿದಳು.

ಪತಂಗಗಳು ಬೆಳಕಿಗೆ ಏಕೆ ಆಕರ್ಷಿತವಾಗುತ್ತವೆ ಎಂಬುದಕ್ಕೆ ನಿಖರವಾದ ಕಾರಣವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಾಗಿಲ್ಲ. ಪತಂಗಗಳು ಬೆಳಕಿನ ಕಡೆಗೆ ಆಕರ್ಷಿತವಾಗುವ ನಡವಳಿಕೆಯನ್ನು ಧನಾತ್ಮಕ ಫೋಟೊಟಾಕ್ಸಿಸ್ ಎಂದು ಕರೆಯಲಾಗುತ್ತದೆ ಮತ್ತು ಇದು ಅನೇಕ ಜಾತಿಯ ಪತಂಗಗಳಲ್ಲಿ ಸಾಮಾನ್ಯವಾಗಿದೆ. ಪತಂಗಗಳು ನಿರ್ದಿಷ್ಟವಾಗಿ ನೇರಳಾತೀತ ಮತ್ತು ನೀಲಿ ಬೆಳಕಿಗೆ ಹೆಚ್ಚು ಆಕರ್ಷಿತವಾಗುತ್ತವೆ.



ಪತಂಗಗಳು ಏಕೆ ಬೆಳಕಿಗೆ ಆಕರ್ಷಿತವಾಗುತ್ತವೆ ಎಂಬುದಕ್ಕೆ ನಿರ್ದಿಷ್ಟ ಕಾರಣಗಳಿಲ್ಲ. ಅವು ತಮ್ಮ ಮಾರ್ಗ ಹುಡುಕಲು ಬೆಳಕಿನ ಮೂಲಗಳಿಗೆ ಆಕರ್ಷಿತವಾಗಿರಬಹುದು. ಸಾಮಾನ್ಯವಾಗಿ ಪತಂಗಗಳು ಮಾರ್ಗ ಹುಡುಕಲು ನೈಸರ್ಗಿಕ ಬೆಳಕಿನ ಮೂಲಗಳನ್ನು ಬಳಸುತ್ತವೆ. ಚಂದ್ರ ಮತ್ತು ನಕ್ಷತ್ರಗಳ ಬೆಳಕನ್ನು ಮಾರ್ಗದರ್ಶಿಗಳಾಗಿ ಬಳಸುತ್ತವೆ. ಇವುಗಳನ್ನು ಹುಡುಕುವ ತಮ್ಮ ಸಮೀಪದಲ್ಲಿ ವಿದ್ಯುತ್ ಬಲ್ಬ್‌ನ ಬೆಳಕು, ಚಿಮಣಿ ದೀಪದ ಬೆಳಕು, ಬೆಂಕಿಯ ಜ್ವಾಲೆ ಅಥವಾ ಇನ್ನಾವುದೇ ಕೃತಕ ಬೆಳಕಿನ ಮೂಲಗಳು ಎದುರಾದಾಗ ಅವು ಗೊಂದಲಕ್ಕೊಳಗಾಗುತ್ತವೆ ಮತ್ತು ದಿಗ್ಭ್ರಮೆಗೊಳ್ಳುತ್ತವೆ. ನಿಜವಾದ ನೈಸರ್ಗಿಕ ಬೆಳಕಿನ ಮೂಲ ಯಾವುದು ಎಂದು ತಿಳಿಯದೇ ಸಮೀಪದ ಬೆಳಕನ್ನೇ ನಿಜವಾದ ಬೆಳಕು ಎಂದು ಭ್ರಮಿಸಿ ಅಲ್ಲೇ ಗಿರಕಿ ಹೊಡೆಯುತ್ತವೆ.

ಶಾಖದ ಮೂಲಗಳನ್ನು ಹುಡುಕುವ ಸಲುವಾಗಿ ಪತಂಗಗಳು ಬೆಳಕಿಗೆ/ಜ್ವಾಲೆಗೆ ಆಕರ್ಷಿತವಾಗುತ್ತವೆ. ಏಕೆಂದರೆ ಪತಂಗಗಳು ಶೀತ ರಕ್ತದ ಜೀವಿಗಳಾಗಿದ್ದು, ಅವು ತಮ್ಮ ದೇಹದ ಉಷ್ಣತೆಯನ್ನು ನಿಯಂತ್ರಿಸುವ ಮಾರ್ಗವಾಗಿ ಬೆಳಕು/ಜ್ವಾಲೆಯ ಉಷ್ಣತೆಗೆ ಆಕರ್ಷಿತವಾಗುತ್ತವೆ. ಪತಂಗಗಳು ಜ್ವಾಲೆಯ ಹತ್ತಿರಕ್ಕೆ ಬಂದಾಗ, ಜ್ವಾಲೆಯ ಶಾಖದಿಂದ ಸುಟ್ಟುಹೋಗಬಹುದು ಅಥವಾ ಸಾಯಬಹುದು. ಕೆಲವು ವೇಳೆ ರೆಕ್ಕೆ ಕಳೆದುಕೊಂಡು ಹಾರಲಾಗದೇ ತತ್ತರಿಸುತ್ತವೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ತಲೆಮಾರುಗಳ ಅಂತರ



ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿದ್ದ ಅಜ್ಜ ಮೊಮ್ಮಗನ ಸಂವಾದದ ವಿಷಯವೊಂದು ಮನಸ್ಸಿಗೆ ಬಹಳಷ್ಟು ಹಿಡಿಸಿ ನನ್ನ ಭಾವನೆಗಳನ್ನು ಕೂಡ ಅದರಲ್ಲಿ ಬೆರೆಸಿ ತಲೆಮಾರುಗಳ ಅಂತರದ ಒಂದು ಸುಂದರ ಚಿತ್ರಣವನ್ನು ನಿಮ್ಮ ಮುಂದಿರಿಸಿದ್ದೇನೆ.

ಹರೆಯದ ಯುವಕನೊಬ್ಬ ತನ್ನ ಅಜ್ಜನನ್ನು ". ಅದು ಹೇಗೆ ನೀವು ತಂತ್ರಜ್ಞಾನವಿಲ್ಲದ ಸಮಯದಲ್ಲಿ ಜೀವನ ಸಾಗಿಸುತ್ತಿದ್ದಿರಿ ಎಂದು ನನಗೆ ಸೋಜಿಗವಾಗುತ್ತದೆ ಅಜ್ಜ! ಕಂಪ್ಯೂಟರ್, ಟಿವಿ, ಇಂಟರ್ನೆಟ್, ಕಾರುಗಳು, ಏರ್ ಕಂಡೀಷನರ್ಗಳು, ಮೊಬೈಲ್ಗಳು, ವಿವಿಧ ಬಗೆಯ ವಿದ್ಯುನ್ಮಾನ ಯಂತ್ರಗಳು ಇಲ್ಲದೆ ಅದು ಹೇಗೆ ಅಷ್ಟು ವರ್ಷಗಳ ಕಾಲ ನೀವು ಜೀವಿಸಿದಿರಿ ಎಂದು ನೆನೆದರೆ ಆಶ್ಚರ್ಯವಾಗುತ್ತದೆ ಎಂದು ಹೇಳಿದ.

ನಸುನಗುತ್ತಾ ಅಜ್ಜ "ಯಾವ ರೀತಿ ಇಂದಿನ ಪೀಳಿಗೆಯ ನೀವು ಪ್ರಾರ್ಥನೆ ಮಾಡದೆ, ಸಹಾನುಭೂತಿ ಇಲ್ಲದೆ, ಗೌರವಾದರೆಗಳಿಲ್ಲದೆ, ಮೌಲ್ಯಯುತ ಶಿಕ್ಷಣವಿಲ್ಲದೆ, ಮಾನವೀಯ ಅಂತಃಕರಣವಿಲ್ಲದೇ, ಒಳ್ಳೆಯ ವಿಚಾರಧಾರೆಗಳಿಲ್ಲದೆ ಲಜ್ಜೆಗಳಿಲ್ಲದೆ ವ್ಯಕ್ತಿತ್ವರಹಿತರಾಗಿ ಬದುಕುತ್ತಿರುವಿರೋ ಅಂತೆಯೇ ನಾವು ಬದುಕಿದ್ದೆವು" ಎಂದು ಉತ್ತರಿಸಿದರು .

ಮತ್ತೆ ಮುಂದುವರೆದು ಅಜ್ಜ ಹೀಗೆ ಹೇಳಿದರು..ಮಗು,ಕೆಲ ದಶಕಗಳ ಹಿಂದೆ ಹುಟ್ಟಿದ ನಾವುಗಳು ಅತ್ಯಂತ ಪುಣ್ಯವಂತರು ನಮ್ಮ ಬದುಕು ಉತ್ತಮ ಬದುಕಿಗೆ ಜೀವಂತ ಉದಾಹರಣೆ. *ಆಟವಾಡುವಾಗ, ಸೈಕಲ್ ಇಲ್ಲವೇ ಗಾಡಿ ಓಡಿಸುವಾಗ ಹೆಲ್ಮೆಟ್ ಧರಿಸದವರು... ಅಸಲಿಗೆ ಅಂದು ಗಾಡಿಗಳೇ ಇರಲಿಲ್ಲ ಬಿಡು!.

ಶಾಲೆ ಬಿಟ್ಟ ಮೇಲೆ ಮನೆಗೆ ಬಂದು ಪಾಟಿಚೀಲ ಎಸೆದವರೆ ಆಟಕ್ಕೆ ಹೊರಟರೆ ಸೂರ್ಯ ಮುಳುಗಿ ಕತ್ತಲಾಗುವವರೆಗೆ ಮನೆ ಸೇರುತ್ತಿರಲಿಲ್ಲ. ಕತ್ತಲಾದ ಮೇಲೆ ಮನೆಗೆ ಬಂದು ಕೈ ಕಾಲು ಮುಖತೊಳೆದು ದೇವರಿಗೆ ನಮಸ್ಕರಿಸಿ ಪ್ರಾರ್ಥನೆ ಮಾಡಿ ನಮ್ಮ ನಮ್ಮ ಮನೆ ಪಾಠಗಳನ್ನು ನಾವೇ ಬರೆದುಕೊಳ್ಳುತ್ತಿದ್ದೆವು. ಅಪ್ಪನ ಶಿಸ್ತು, ಅಮ್ಮನ ರಕ್ಷೆ ನಮಗಿರುತ್ತಿತ್ತು. ಅಪ್ಪನೆಡೆ ಒಂದು ಭಯ ಮಿಶ್ರಿತ ಗೌರವ ಹೊಂದಿದ್ದು ಅಪ್ಪ ಮನೆಗೆ ಕಾಲಿಟ್ಟರೆ ಸೂಜಿ ಬಿದ್ದರೂ ಕೇಳಿಸುವಂತಹ ನಿಶ್ಯಬ್ದ ಮನೆಯನ್ನು ಆಳುತ್ತಿತ್ತು.

ಬೆಳಗಿನ ತಿಂಡಿಗೆ ಇಡ್ಲಿ ದೋಸೆಯೇ ಆಗಬೇಕೆಂದಿರಲಿಲ್ಲ. ಚಹಾ ಕಾಫಿ ಅಂತೂ ಬಲು ದೂರ... ಅಸಲಿಗೆ ತಿಂಡಿಯ ಕಾನ್ಸೆಪ್ಟೇ ಇರಲಿಲ್ಲ, ಚಿಕ್ಕ ಮಕ್ಕಳಿಗೆ ಮಾತ್ರ ರಾತ್ರಿ ಮನೆಯಲ್ಲಿ ಎಲ್ಲರೂ ಉಂಡ ಮೇಲೆ ಮಿಕ್ಕಿದ ಅನ್ನಕ್ಕೆ ತುಸು ಎಣ್ಣೆ ವಿವಿಧ ಬಗೆಯ ಚಟ್ನಿಪುಡಿಗಳು ಉಪ್ಪಿನಕಾಯಿ ಕಲಸಿ ಕೈಗೆ ತುತ್ತು ಹಾಕಿದರೆ ಆಹಾ ಸ್ವರ್ಗಕ್ಕೆ ಮೂರೇ ಗೇಣು. ಆಗೊಮ್ಮೆ ಈಗೊಮ್ಮೆ ಮನೆಗೆ ನೆಂಟರು ಬಂದಾಗ ಸಿಹಿ ಅಡುಗೆ, ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ಮಾತ್ರ ಹೋಳಿಗೆ, ಹುಗ್ಗಿಗಳ ಭರ್ಜರಿ ಊಟ. ಬೆಳಗಿನ ಜಾವವೇ ಅಮಾವಾಸ್ಯೆ ಹುಣ್ಣಿಮೆಗಳನ್ನು ಹೊರತುಪಡಿಸಿ ಎಲ್ಲರ ಮನೆಗಳಲ್ಲಿ ಪಟ ಪಟ ಎಂದು ರೊಟ್ಟಿ ಬಡಿಯುವ ಶಬ್ದ. ಹಿಂದಿನ ದಿನ ಹೊಲದ ಬದುವಿನಲ್ಲಿ ಬೆಳೆದ ತರಕಾರಿಗಳನ್ನು, ಸೊಪ್ಪುಗಳ ಪಲ್ಯ, ಇಲ್ಲವೇ ಬೇಳೆ, ಕಾಳುಗಳನ್ನು ಕುದಿಸಿದ ಗಡಿಗೆಯಿಂದಲೇ ಆಗ ತಾನೆ ಬಡಿದು ಬೇಯಿಸಿದ ಬಿಸಿಬಿಸಿಯಾದ ರೊಟ್ಟಿಗಳನ್ನು ಕೈಯಲ್ಲಿ ತಟ್ಟೆಯಂತೆ ಹಿಡಿದು ಅದರಲ್ಲಿ ಪಲ್ಯ ಇಲ್ಲವೇ ಕಾಳನ್ನು ಹಾಕಿಸಿಕೊಂಡು ಮೇಲೆ ಒಂದು ಚಮಚದಷ್ಟು ಬೆಳ್ಳುಳ್ಳಿ ಖಾರ, ಇಲ್ಲವೇ ಹಸಿ ಮೆಣಸಿನಕಾಯಿ ಹಿಂಡಿ ಹಾಕಿ ಅದಕ್ಕೆ ತುಸುವೇ ಕಾಯಿಸಿದ ಎಣ್ಣೆ ಕಲಸಿ ತಿಂದರೆ ಆಹಾ! ಏಳೆಂಟು ರೊಟ್ಟಿಗಳು ಸಲೀಸಾಗಿ ಹೊಟ್ಟೆಯಲ್ಲಿ ಇಳಿಯುತ್ತಿದ್ದವು. ನಮ್ಮ ಅಮ್ಮಂದಿರೂ ಅಷ್ಟೇ! ಅಳೆದು ತೂಗಿ ರೊಟ್ಟಿ ಮಾಡುತ್ತಿರಲಿಲ್ಲ. ಬಡಿಯ ಕೈಲೆ ನಾಕ್ ರೊಟ್ಟಿ ಹೆಚ್ಚಿಗೆ ಬಡಿ ಎಂಬ ತತ್ವವುಳ್ಳವರು. ಒಮ್ಮೆ ರೊಟ್ಟಿ ತಿಂದರೆ ರಾತ್ರಿಯೇ ಮುಂದಿನ ಊಟ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ನಾವು ನಮ್ಮ ನಿಜವಾದ ಸ್ನೇಹಿತರೊಂದಿಗೆ ಆಟವಾಡಿದ್ದೇವೆಯೇ ಹೊರತು ಭ್ರಮೆಯ ಜಗತ್ತಿನ ಹೀರೋಗಳೊಂದಿಗಲ್ಲ. ನಮ್ಮ ಆಟ ದೈಹಿಕ ಶ್ರಮವನ್ನು ಒಳಗೊಂಡಿದ್ದು ನಮ್ಮಲ್ಲಿ ಪರಸ್ಪರ ಸಹೋದರ ಭಾವ, ಹೊಂದಾಣಿಕೆಗೆ ಬರವಿರಲಿಲ್ಲ. ಹೋಳಿ ಹಬ್ಬದಲ್ಲಿ ಜಾತಿ ಭೇದವಿಲ್ಲದೆ ಸ್ನೇಹಿತರೊಡಗೂಡಿ ಕಾಮನ ಸುಟ್ಟು, ಮರುದಿನ ಮುಂಜಾನೆ ಬಣ್ಣ ಎರಚಿ ಸಂತಸ ಪಟ್ಟದ್ದಿದೆ. ಮೊಹರಂನಲ್ಲಿ ತಾಯಂದಿರ ಹರಕೆಗೆ ಫಕೀರರಾದರೆ ಅಲೆ ದೇವರ ಹೊತ್ತು ಮೆರೆದದ್ದೂ ಇದೆ. ಯಾರದೋ ಮನೆಯ ಹುಣಸೆ ಹಣ್ಣಿಗೆ ಮತ್ತಾರದೋ ಮನೆಯ ಜೀರಿಗೆ ಬೆಲ್ಲ ಉಪ್ಪು ಕಾರ ತಂದು ಕಲ್ಲಿನ ಮೇಲೆ ಕುಟ್ಟಿ ಕಡ್ಡಿಗೆ ಚುಚ್ಚಿ ಮೆದ್ದದ್ದಿದೆ. ಊರ ಹೊರಗಿನ ತೋಪುಗಳಲ್ಲಿನ ಮಾವಿನ ಹಣ್ಣು, ಪೇರಲ ಕಾಯಿ,ತೋಟದಲ್ಲಿನ ತೆಂಗಿನ ಎಳನೀರು ಎಲ್ಲದರ ರುಚಿ ನೋಡಿದ್ದೇವೆ.

ಆಟವಾಡಿ ದಣಿದಾಗ ಕೆರೆ, ಹೊಳೆ,ಹಳ್ಳ ಬಾವಿಗಳ ನೀರನ್ನು ಕುಡಿದಿದ್ದೇವೆಯೇ ಹೊರತು ಬಾಟಲಿನಲ್ಲಿ ಪ್ಯಾಕ್ ಮಾಡಲ್ಪಟ್ಟ ಮಿನರಲ್ ವಾಟರನ್ನಲ್ಲ. ಒಂದೇ ತಟ್ಟೆಯಲ್ಲಿ ಊಟ ಒಂದೇ ಗ್ಲಾಸಿನಲ್ಲಿ ನೀರು ಕಚ್ಚಿ ಕುಡಿದರೂ ನಾವೆಂದೂ ಚಿಂತಿಸಿಲ್ಲ ಮತ್ತು ನಮಗೆ ಯಾವುದೇ ಆರೋಗ್ಯ ಸಂಬಂಧಿ ತೊಂದರೆಗಳಾಗಿರಲಿಲ್ಲ ಎಂದು ಹೇಳಿದರೆ ನೀನು ನಂಬಲಿಕ್ಕಿಲ್ಲ ಬಿಡು! ಈಗಿನಂತೆ ಆಗ ಯಾವುದೇ ವಾಹನಗಳಾಗಲಿ,ರಸ್ತೆ ಸೌಕರ್ಯಗಳಾಗಲಿ ಇರಲಿಲ್ಲ, ಬರಿಗಾಲಿನಲ್ಲಿಯೇ ಮೈಲಿಗಟ್ಟಲೆ ನಡೆಯುತ್ತಿದ್ದೆವು.ಮನೆಯಲ್ಲಿ ಮಾಡಿದ ರೊಟ್ಟಿ ಚಟ್ನಿ, ಹೊಲದ ಬದಿಯಲ್ಲಿ ಸಿಗುವ ಸೊಪ್ಪು, ಹೊಲದಲ್ಲಿ ಬೆಳೆಯುವ ತರಕಾರಿ, ಅಕ್ಕಡಿ ಕಾಳುಗಳು ಜೋಳ, ಗೋದಿ,ನವಣೆ ನಮ್ಮ ಮುಖ್ಯ ಆಹಾರಗಳಾಗಿದ್ದವು ಅಪೌಷ್ಟಿಕತೆ ನಮ್ಮನ್ನೆಂದೂ ಕಾಡಲಿಲ್ಲ.

ನಾವೇ ತಯಾರಿಸಿದ ಕಟ್ಟಿಗೆಯ ಸಾಮಾನುಗಳು ನಮ್ಮ ಆಟಿಕೆಗಳಾಗಿದ್ದವು. ಬಡಿಗೆ, ಕೋಲು, ಕಲ್ಲು, ತೆಂಗಿನ ಹೆಡೆ, ಹಳೆಯ ಸೈಕಲ್ ಗಾಲಿ, ಕಟ್ಟಿಗೆಯಿಂದ ತಯಾರಿಸಿದ ಚಿಣಿ ಪಣಿ, ಗೋಲಿ, ಗಜ್ಜುಗ, ಬುಗುರಿ, ಗುಂಡ ಕವಡೆಯ ಬದಲಾಗಿ ತೇಯ್ದ ಹುಣಿಸೆ ಬೀಜಗಳು ನಮ್ಮ ಆಟಿಕೆಗಳಾಗಿದ್ದವು. ನಿಮ್ಮಂತೆ ನಾವು ಸ್ವಿಮ್ಮಿಂಗ್ ಪೂಲ್ ಗಳಿಗೆ ಹೋಗಿ ಈಜು ಕಲಿತಿಲ್ಲ ಬದಲಾಗಿ ಊರಿನ ದೊಡ್ಡ ಬಾವಿಗಳು ಹೊಳೆ ಹಳ್ಳಗಳೇ ನಮ್ಮ ಈಜು ತಾಣಗಳು. ಜೋಳದ ದಂಟಿನ ಪೆಂಡಿಯನ್ನು ಇಲ್ಲವೇ ತಗಡಿನ ಡಬ್ಬಿಯನ್ನು ಬೆನ್ನಿಗೆ ಕಟ್ಟಿಕೊಂಡು ಈಜು ಹೊಡೆಯುವುದನ್ನು ನಾವು ಕಲಿತಿದ್ದೆವು.

ಹೊಲದಲ್ಲಿಯೂ ಕೂಡ ನಾವು ಅಪ್ಪನೊಂದಿಗೆ ಕೈಗೂಡುತ್ತಿದ್ದೆವು. ಬಿತ್ತುವ, ಕಳೆ ತೆಗೆಯುವ, ರಾಶಿ ಮಾಡುವ ಸಮಯದಲ್ಲಿ ಶಾಲೆಗೆ ಕಡ್ಡಾಯವಾಗಿ ರಜೆ ಹಾಕುತ್ತಿದ್ದೆವು. ಶಾಲೆಯ ಶಿಕ್ಷಕರು ಕೂಡ ನಮಗೆ ವಿನಾಯತಿ ನೀಡುತ್ತಿದ್ದರು. ಮನೆಯಲ್ಲಿ ದನ ಕರುಗಳು ಇದ್ದರೆ ರಜೆಯಲ್ಲಿ ದನ ಕಾಯುವ ಕೆಲಸ ಕೂಡ ನಮ್ಮದೇ, ವಾರಿಗೆಯ ಹತ್ತಾರು ಜನ ಹುಡುಗರು ದನ ಕಾಯಲು ನಮ್ಮ ನಮ್ಮ ದನಗಳನ್ನು ತಿರುವಿಕೊಂಡು ಹೊರಟು ಒಂದೆಡೆ ಅವುಗಳನ್ನು ಮೇಯಲು ಬಿಟ್ಟು,ಮರದಡಿಯಲ್ಲಿ ಊಟ ಆಟ ಹರಟೆ ಎಲ್ಲವೂ ನಡೆಯುತ್ತಿತ್ತು.

ನಮ್ಮ ಪಾಲಕರು ಶ್ರೀಮಂತರಾಗಿರಲಿಲ್ಲ ನಿಜ ಆದರೆ ನಮಗೆ ಅಪಾರ ಪ್ರೀತಿ, ಸಮಯ ಮತ್ತು ಕೆಲಸದ ಮಹತ್ವವನ್ನು ತಿಳಿಸಿಕೊಟ್ಟರು. ಸಂಬಂಧಗಳ ನಡುವಿನ ಮಾರ್ದವತೆಯನ್ನು, ಪ್ರೀತಿ ವಿಶ್ವಾಸಗಳನ್ನು ಅವರು ಕಲಿಸಲಿಲ್ಲ ಬದಲಾಗಿ ನಡೆದು ತೋರಿಸಿದರು. ಅಪ್ಪನ ಹೆಗಲೇರಿ ಹತ್ತಿರದ ಊರಿನ ಜಾತ್ರೆ, ಸಂತೆಗಳಲ್ಲಿ ಪೀಪಿ, ಬೆಂಡು ಬತ್ತಾಸು, ಹೆಣ್ಣು ಮಕ್ಕಳಾದರೆ ಬಳೆ ಟೇಪುಗಳನ್ನು ಕೊಡಿಸಿಕೊಂಡು ಬರುವುದು ಬಹುದೊಡ್ಡ ಲಕ್ಸುರಿಯಾಗಿತ್ತು ನಮ್ಮ ಪಾಲಿಗೆ. ವರ್ಷಕ್ಕೊಮ್ಮೆ ಯುಗಾದಿಗೆ ಒಂದು ಜೊತೆ ಬಟ್ಟೆ ಕೊಡಿಸಿದರೆ ನಮ್ಮ ಸಂತಸಕ್ಕೆ ಪಾರವೇ ಇರಲಿಲ್ಲ. ಮನೆಯ ಎಲ್ಲಾ ಮಕ್ಕಳಿಗೂ ಒಂದೇ ತಾನಿನ ಬಟ್ಟೆ ಹರಿದು ಅದರಲ್ಲಿಯೇ ಅಂಗಿ ಹೊಲಿಸಿದರೆ, ಮತ್ತೊಂದು ದಪ್ಪನೆಯ ಬಟ್ಟೆಯ ತಾನಿನಲ್ಲಿ ಎಲ್ಲರಿಗೂ ಚೊಣ್ಣ ಹೊಲಿಸುತ್ತಿದ್ದರು.

ತಿಂಗಳಿಗೊಮ್ಮೆ ಊರ ಹೊರಗಿನ ಆಲದ ಮರ ಇಲ್ಲವೇ ಬೇವಿನ ಮರದ ಕೆಳಗೆ ಕುಳಿತು ಚೌರ ಮಾಡುವ ಬೀರಪ್ಪಜ್ಜನ ಬಳಿ ಅಪ್ಪ ಗುಂಡು ಹೊಡೆಸಲು ತಾಕೀತು ಮಾಡಿ ಮನೆಗೆ ಹೋದರೆ ಆತನನ್ನು ಕಾಡಿ ಬೇಡಿ, ಅಪ್ಪಾರ್ ಬೈತಾರ ಅನ್ನೋ ಹೆದರಿಕೆಯನ್ನು ಹೊರತುಪಡಿಸಿ ತುಸು ಹೆಚ್ಚು ಕೂದಲು ಬಿಡಿಸಿಕೊಂಡು ಕ್ರಾಪ್ ಕಟ್ ಮಾಡಿಸಿಕೊಂಡು ಬಂದರೆ, ತನ್ನ ಮೀಸೆ ಅಡಿಯಲ್ಲಿ ನಗುತ್ತಾ ಹುಸಿಮುನಿಸನ್ನು ತೋರುವ ಅಪ್ಪ "ಮುಂದಿನ ಸಲ ಪೂರ್ತಿ ಗಾಂಧಿ ಕಟ್ ಮಾಡಿಸಬೇಕು ನೋಡು" ಎಂದು ಹೇಳಿದಾಗ ಯುದ್ಧವನ್ನೇ ಗೆದ್ದಷ್ಟು ಸಂತಸದಿಂದ ತಲೆಯಾಡಿಸಿ ಹಿತ್ತಲಿಗೆ ಹೋಗಿ ತಲೆ ಸ್ನಾನ ಮಾಡಿ ಒಳಗೆ ಬಂದು ದೇವರಿಗೆ ನಮಿಸಿ ತಲೆಯ ಬಾಚಿ ಮಾಡಿನಲ್ಲಿರುವ ಹಳೆಯ ಮಾಸಿದ ಕನ್ನಡಿಯಲ್ಲಿ ಕ್ರಾಪ್ ಕೂದಲನ್ನು ಮೃದುವಾಗಿ ತಟ್ಟಿದರೆ ಅದುವೇ ನಮ್ಮ ಸಿಂಗಾರ. ಮುಂದುವರೆಯುವುದು

# ಪ್ರಕೃತಿ ಕೋಪ...ವಿಕೋಪ...

ಚೇತನ ಭಾರ್ಗವ ಬೆಂಗಳೂರು



ಪ್ರಕೃತಿ ಮುನಿಸಿಕೊಂಡರೆ ಮನುಕುಲದ ನಾಶ ನಿಶ್ಚಿತ. ಮನುಷ್ಯ ತನ್ನ ಸ್ವಾರ್ಥ ದುರಾಸೆಯಿಂದ ಅರಣ್ಯ ಸಂಪತ್ತನ್ನು ಲೂಟಿ ಮಾಡುತ್ತಿದ್ದಾನೆ. ಭೂಮಿತಾಯಿಯ ಒಡಲನ್ನು ಬಗೆಯುತ್ತಿದ್ದಾನೆ. ಇದರ ಪರಿಣಾಮವೇ ಇಂದು ದೇಶದ ವಿವಿಧ ಭಾಗದಲ್ಲಿ ವರುಣ ದೇವನು ತನ್ನ ರುದ್ರನರ್ತನವನ್ನು ಪ್ರದರ್ಶಿಸುತ್ತಿರುವುದಕ್ಕೆ ಜ್ವಲಂತ ಸಾಕ್ಷಿಯಾಗಿದೆ.

ಮಾನವನ ಅತಿಯಾಸೆ, ಸಂಪನ್ಮೂಲಗಳ ದುರ್ಬಳಕೆ, ಆಡಂಬರದ ಜೀವನ ಶೈಲಿ ಅತಿಯಾದ ಪ್ಲಾಸ್ಟಿಕ್ ವಸ್ತುಗಳ ಬಳಕೆಯು ಪ್ರಕೃತಿಯ ಮೇಲೆ ದುಷ್ಪರಿಣಾಮ ಬೀರುತ್ತಿದೆ ಅಲ್ಲದೆ ನಗರೀಕರಣದ ಭರಾಟೆಯಲ್ಲಿ ಮರಗಳನ್ನು ಕಡಿದು ಮಾನವನು ಕಾಂಕ್ರೀಟ್ ಕಾಡುಗಳನ್ನು ನಿರ್ಮಿಸುತ್ತಿದ್ದಾನೆ. ಸ್ವಾಭಾವಿಕವಾಗಿ ಕೆರೆಗಳಿಗೆ ನೀರನ್ನು ಹೀರಿಕೊಳ್ಳುವ ಗುಣವಿರುತ್ತದೆ. ಇತ್ತೀಚಿನ ದಿನಗಳಲ್ಲಿ ರೈತರ ನೀರಾವರಿಗೆ ಆಸರೆಯಾಗಿದ್ದ ಎಲ್ಲಾ ಕೆರೆಗಳನ್ನು ಮುಚ್ಚಿ ರಿಯಲ್ ಎಸ್ಟೇಟ್ ಗರಿಯೆತ್ತಿದೆ. ಕೆರೆಗಳೆಲ್ಲ ಮಾಯವಾಗಿ ಬಡಾವಣೆಗಳು ನಿರ್ಮಾಣವಾಗಿದೆ. ನೀರನ್ನು ಹೀರಿಕೊಳ್ಳುವ ಸೆಲೆಗಳು ಬತ್ತಿ ಹೋಗಿವೆ. ಅಳಿದುಳಿದ ಕೆರೆಗಳಲ್ಲಿ ಹೂಳು ತೆಗೆಯದೆ ನೀರನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದೆ.

ಭೂಮಿಯು ನೀರನ್ನು ಹೀರಿಕೊಳ್ಳದೆ, ಇದರ ಮೇಲ್ಭಾಗದಲ್ಲಿ ನೀರು ಹರಿದು ಪ್ರವಾಹ ಉಂಟಾಗುವ ಪರಿಸ್ಥಿತಿ ಎದುರಾಗಿದೆ. ಕೆರೆಗಳಲ್ಲಿ ಜಲಾಶಯಗಳಲ್ಲಿ ಹೂಳು ತೆಗೆಯದಿದ್ದ ಪರಿಣಾಮವಾಗಿ ಕೆರೆ ಜಲಾಶಯಗಳಲ್ಲಿ ನೀರು ಬೇಗ ಭರ್ತಿಯಾಗಿ,ನೀರಿನ ಸಂಗ್ರಹಣಾ ಶಕ್ತಿ ಕಡಿಮೆಯಾಗುತ್ತಿದೆ. ನಗರ ಪ್ರದೇಶದಲ್ಲಿ ಒಳಚರಂಡಿಯ ವ್ಯವಸ್ಥೆ ಸರಿಯಾದ ಕ್ರಮದಲ್ಲಿ ಇಲ್ಲದೆ ಇರುವುದರಿಂದ ಅಲ್ಪ ಪ್ರಮಾಣದಲ್ಲಿ ಮಳೆಯಾದರೂ ರಸ್ತೆಗಳೆಲ್ಲ ನದಿಗಳಂತಾಗಿ ಮನೆಗಳಿಗೆಲ್ಲ ನೀರು ನುಗ್ಗುತ್ತಿದೆ. ಬೆಟ್ಟಗುಡ್ಡಗಳನ್ನು ಅವೈಜ್ಞಾನಿಕವಾಗಿ ಕಡಿದು ರಸ್ತೆಯ ಅಗಲೀಕರಣ ಮಾಡುತ್ತಿರುವುದರಿಂದ ಮಳೆಯ ಪ್ರಮಾಣ ಹೆಚ್ಚಾದಾಗ ನೀರಿನ ರಭಸಕ್ಕೆ ಬೆಟ್ಟ ಗುಡ್ಡಗಳು ಕುಸಿದು ಅನೇಕ ದುರಂತಕ್ಕೆ ಕಾರಣವಾಗುತ್ತಿದೆ.

ಜನಸಂಖ್ಯೆ ಹೆಚ್ಚಿದಂತೆ ಮಾನವನ ಚಟುವಟಿಕೆಗಳು ಉಲ್ಬಣ ಗೊಂಡು ಭೂಪ್ರದೇಶದ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಮನಬಂದಂತೆ ಅರಣ್ಯ ಪ್ರದೇಶ ಬೆಟ್ಟಗುಡ್ಡಗಳ ಸಮೀಪ ಹೋಟೆಲ್ ರೆಸಾರ್ಟ್ ಹಾಗೂ ಹೋಂಸ್ಟೇ ಹೆಸರಿನಲ್ಲಿ ಪ್ರಕೃತಿಯ ಸೂಕ್ಷ್ಮ ಪ್ರದೇಶಗಳಲ್ಲಿ ಒತ್ತುವರಿ ಮಾಡಿದ್ದರಿಂದ ಕೆಲವು ವರ್ಷದ ಹಿಂದೆ ಕೊಡಗಿನಲ್ಲಿ ಉಂಟಾದ ಭೂಕುಸಿತ ವನ್ನು ನೆನಸಿಕೊಂಡರೆ ಇಂದಿಗೂ ಭಯ ತರುತ್ತದೆ.

ಈಗ ಕೇರಳದ ವೈಯನಾಡಿನಲ್ಲಿ ನಡೆದಿರುವ ವಿಕೋಪಕ್ಕೂ ಒಂದು ರೀತಿ ವಿಪರೀತವಾದ ಮಾನವ ಚಟುವಟಿಕೆಗಳೂ ಕೂಡ ಕಾರಣ. ಮಳೆಗಾಲದಲ್ಲಿ ಮಳೆಯ ನೀರನ್ನು ಹಿಡಿದಿಟ್ಟು ಭೂಮಿಯೊಳಗೆ ಇಂಗಿಸುತ್ತಿದ್ದ ಮರಗಳು ಕಣ್ಮರೆಯಾಗಿವೆ. ಮಣ್ಣಿನ ಸವಕಳಿ ಉಂಟಾಗುತ್ತಿದೆ. ಗುಡ್ಡ ಗುಡ್ಡಗಳೇ ಕುಸಿದು ಬೆಟ್ಟದ ಅಡಿಯ ಗ್ರಾಮಗಳು ರಾತ್ರಿ ಬೆಳಗಾಗುವುದರೊಳಗೆ ಕಣ್ಮರೆಯಾಗುತ್ತಿದೆ. ವೈನಾಡಿನಲ್ಲಿ ದಿನದಿಂದ ದಿನಕ್ಕೆ ಸಾವಿನ ಸಂಖ್ಯೆ ಹೆಚ್ಚುತ್ತಲೇ ಇದೆ. ಆಬಾಲ ವೃದ್ಧರಾದಿಯಾಗಿ ಹಲವಾರು ಸಾವಿಗೀಡಾಗಿದ್ದಾರೆ . ಯಾರೋ ಮಾಡುವ ತಪ್ಪಿಗೆ ಇನ್ಯಾರೋ ಅಮಾಯಕರು



ಬಲಿಯಾಗುವ ಈ ಅನ್ಯಾಯ ಹಾಗೂ ಅಲ್ಲಿನ ಭೀಕರ ದೃಶ್ಯವನ್ನು ನೋಡಿದರೆ ಮೈ ಜುಮ್ ಎನ್ನುತ್ತದೆ.

ಇನ್ನಾದರೂ ಮಾನವನು ತನ್ನ ತಪ್ಪನ್ನು ಅರಿತುಕೊಂಡು ನಿಸರ್ಗದ ಸಮತೋಲನದಲ್ಲಿ ಹಸ್ತಕ್ಷೇಪ ಮಾಡದೆ ಅಭಿವೃದ್ಧಿಯ ಹೆಸರಿನಲ್ಲಿ ಮಾಡುವ ಎಲ್ಲಾ ಕೃತ್ಯಗಳನ್ನು ಸಮರ್ಥನೆ ಮಾಡಿಕೊಳ್ಳದೆ, ತಾಯಿಯಾದ ನಿಸರ್ಗ ದೇವಿಯ ಮಡಿಲಲ್ಲಿ ಬದುಕಿ ಸಹಬಾಳ್ವೆ ನಡೆಸುವುದನ್ನು ಕಲಿಯಬೇಕು. ಇಲ್ಲವಾದಲ್ಲಿ ಮುಂದೊಂದು ದಿನ ನಡೆಯಬಹುದಾದ ಪ್ರಳಯದ ಕಲ್ಪನೆ, ಕೆಲವೇ ವರ್ಷಗಳಲ್ಲಿ ನಿಜವಾಗುವುದರಲ್ಲಿ ಆಶ್ಚರ್ಯವೇನಿಲ್ಲ.ಆದ್ದರಿಂದ ಜೀವದಾತೆಯಾದ ಪ್ರಕೃತಿ ಮಾತೆಯ ಮೇಲೆ ಮಾಡುವ ಹಿಂಸೆ ತಪ್ಪಿಸಿ ನಿಸರ್ಗದ ಹಸಿರಿನಲ್ಲಿ ಬಾಳನ್ನು ಬದುಕೋಣ ಬದುಕು ಹಸನಾಗಿಸೋಣ.

ಕವಿ ಮನಸು

## ನಿವೃತ್ತರೊಬ್ಬರ ದಿನಚರಿ

ನಿವೃತ್ತರಾದವರೊಬ್ಬರು ಸಿಕ್ಕರು
ಹೊತ್ತು ಕಳೆಯಲು ಏನು ಮಾಡುವಿರಿ?
ನನಗೆ ಹೊತ್ತು ಸಾಲದು!
ಹೇಗೆ ? ನನಗೂ ಹೇಳಿರಿ,
ಬೆಳಿಗ್ಗೆ ಒಂಬತ್ತು ಗಂಟೆಗೆ ಏಳುವೆ
ಸ್ನಾನ ಮಾಡಿದಾಗ ಹತ್ತು ಗಂಟೆ
ಪೂಜೆ ಮಾಡಿ ಮುಗಿಸಿದಾಗ ಹನ್ನೊಂದು
ಗಂಟೆ
ಟಿಫಿನ್ ಮಾಡಿದಾಗ ಹನ್ನೊಂದುವರೆ ಗಂಟೆ
ಡ್ರೆಸ್ ಮಾಡಿಕೊಂಡು ಹೊರಗೆ
ಹೋಗುವಾಗ ಹನ್ನೆರಡು ಗಂಟೆ
ಲೈಬ್ರರಿ ಇತ್ಯಾದಿ ಒಂದು ಗಂಟೆ
ಮಾರ್ಕೆಟ್ ಇತ್ಯಾದಿ ಎರಡು ಗಂಟೆ
ಊಟದ ವೇಳೆ ಮೂರು ಗಂಟೆ
ವಾರ್ತಾ ,ವಾರ ಪತ್ರಿಕೆ ನಾಲ್ಕು ಗಂಟೆ
ವಿಶ್ರಾಂತಿಗೆಂದು ಮಲಗಿ ಎದ್ದಾಗ ಆರು
ಗಂಟೆ
ಹೊರಗೆ ಹೋಗಿ ನಿವೃತ್ತರೊಂದಿಗೆ ಹರಟೆ
ಎಂಟು ಗಂಟೆ
ಧಾರಾವಾಹಿ ವಾರ್ತಾ ಊಟ ಮಾಡಿದಾಗ
ಹನ್ನೊಂದು ಗಂಟೆ
ನಿದ್ದೆಗೆ ಜಾರಿ ಬೆಳಿಗ್ಗೆ ಎದ್ದಾಗ ಒಂಬತ್ತು
ಗಂಟೆ.

– ಚಂದ್ರಶೇಖರಯ್ಯ ರೋಣದಮಠ

## ನೆಮ್ಮದಿ ಉಳಿಸೂ..




ದಯೆದೋರು ಮಳೆರಾಯ ನೀ ನಮ್ಮಲಿ
ತೊರೆಯುತ ಮುನಿಸೂ ನೆಮ್ಮದಿ ಉಳಿಸೂ,
ನಮ್ಮನು ಹರಸು॥ಪ॥

ಸುತ್ತೆಲ್ಲ ನೆರೆ ತುಂಬಿ ನೆಲ ಮುಳುಗಿದೆ
ವಾಸಿಸುವ ಮನೆಯಿಂದು ಧರೆಗುರುಳಿದೆ
ಬದುಕುಳಿಯೆ ಹೊರಬರಲು ಮನವಿದ್ದರೂ
ರಸ್ತೆಗಳು ಉಳಿದಿಲ್ಲ ಸಂಚಾರಕೆ

ಬಹುದೊಡ್ಡ ಬೆಟ್ಟಗಳು ಕುಸಿಯುತ್ತಿವೆ
ಅದರಡಿಗೆ ಜೀವಗಳು ಸಾಕಷ್ಟಿವೆ
ಬರಬೇಡ ನೀನೆಂದು ನಾ ಹೇಳೆನು
ಹಿತವಾಗಿ ನೀ ಸುರಿದು ಪೊರೆ ನಮ್ಮನು

ನದಿಗಳಲಿ ದಡ ಮೀರಿ ಜಲ ಹರಿದಿದೆ
ನೋಡುತಿರೆ ಭಯ ತರುವ ಕೆಂಬಣ್ಣದೇ
ಕೆಲಜನರು ಮಾಡಿರುವ ಅಪರಾಧಕೆ
ಸರ್ವರಿಗೆ ಈ ರೀತಿ ಸಜೆ ಏತಕೇ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಎಂಥ ಭಕ್ತಿ ನಿನ್ನದು

ಬೇಡ ಕುಲದ ರಾಜಕುಮಾರ
ಜಗದ ಅತ್ಯುನ್ನತ ಬಿಲ್ವಿದ್ಯೆಗಾರ
ಗುರುಗಳನ್ನು ಮನದಲ್ಲಿಟ್ಟು ಆರಾಧಿಸಿದನು
ಏಕಲವ್ಯನೆಂಬ ಬಾಲಕನು

ಕ್ಷತ್ರಿಯನಲ್ಲ ಎಂಬ ಕಾರಣದಿ
ಬಿಲ್ವಿದ್ಯೆಯ ಕಲಿಸಲು ನಿರಾಕರಿಸಿ
ಕಳುಹಿಸಿದರು ಗುರು ಆ ದಿನದಿ
ಹುತ್ತದ ಮಣ್ಣಿಂದ ಪ್ರತಿರೂಪವ ತಯಾರಿಸಿ

ದ್ರೋಣಾಚಾರ್ಯರನ್ನೇ ಗುರುವಾಗಿ
ಅಲಂಕರಿಸಿ
ರುದ್ರಾಕ್ಷಿ ಮಾಲೆಯ ಧರಿಸಿ
ಹೂಗಳಿಂದ ಪ್ರತಿಮೆಯ ಪೂಜಿಸಿ
ತನು ಮನದೊಂದಿಗೆ ಭಕ್ತಿಯಿಂದ ನಮಸ್ಕರಿಸಿ

ನೀವೇ ನನ್ನಯ ಗುರುಗಳೆನುತ
ಮನದಲ್ಲೇ ಸಂಕಲ್ಪ ಮಾಡುತ
ಪ್ರಾರಂಭಿಸಿದನು ಬಿಲ್ವಿದ್ಯೆಯನು
ಆದನವನು ಅಪ್ರತಿಮ ಪರಿಣಿತನು

ಗುರುಗಳು ದಕ್ಷಿಣೆ ಕೇಳಲು
ಯೋಚಿಸದೆ ಕೊಟ್ಟನು ಹೆಬ್ಬೆರಳು
ಎಂಥಾ ಗುರುಭಕ್ತಿ ನಿನ್ನದು
ನಿನ್ನಯ ತ್ಯಾಗ ದೊಡ್ಡದು

– ಚೇತನ ಭಾರ್ಗವ ಬೆಂಗಳೂರು

# ಈ ಬದುಕು ಆಶೀರ್ವಾದಗಳ ಸಂತೆ..!

ಕೆಲವೊಮ್ಮೆ ಹೀಗಾಗುತ್ತದೆ. ಎತೇಚ್ಛವಾಗಿ ಬಾಹ್ಯ ಸಂಪತ್ತು, ಆಕರ್ಷಣೆ, ತಳುಕು ಬಳುಕಿನ ಜಂಜಾಟದೊಳಗೆ ಕಳೆದು ಹೋಗಿ, ಆಂತರಿಕ ನೋಟ, ಆತ್ಮವಿಮರ್ಶೆ, ಎತ್ತ ಸಾಗುತ್ತಿದೆ ನಮ್ಮ ಜೀವನ ಎಂದು ಯೋಚಿಸುವ ಪರಿಪಾಠವನ್ನೇ ಮರೆತು ಸಾಗುತ್ತಿರುತ್ತೇವೆ. ಪ್ರತಿನಿತ್ಯ ಸಾವು ನೋವುಗಳ ಕೇಳುತ್ತಿರುತ್ತೇವೆ. ನಮ್ಮ ಆತ್ಮೀಯರ ಲಿಸ್ಟ್ ನಲ್ಲೇ ಯಾರನ್ನೋ ಕಳೆದುಕೊಂಡಿರುತ್ತೇವೆ. ಇಂದು ನಮ್ಮ ಜೊತೆ ಇದ್ದವರೇ ಮತ್ತೊಂದು ಕ್ಷಣಕ್ಕೆ ಇಲ್ಲವಾಗಿರುತ್ತಾರೆ. ಆದರೆ ಇದೆಲ್ಲ ನೋಡಿಯೂ ಕೂಡ ನಾವು ಮಾತ್ರ ಸಾವೇ ಇಲ್ಲದವರಂತೆ, ನಮಗೇನಾಗಲು ಸಾಧ್ಯ ಎಂಬ ಅತಿಯಾದ ಆತ್ಮವಿಶ್ವಾಸವೊ, ಅಹಂಕಾರದಲ್ಲಿಯೋ ಮೆರೆಯುತ್ತಿರುತ್ತೇವೆ. ಎಷ್ಟೋ ಲೆಕ್ಕವಿಲ್ಲದ, ಅರ್ಥಹೀನ ಕನಸುಗಳ ತಲೆಯಲ್ಲಿ ಹೊತ್ತು ಅವುಗಳನ್ನು ಈಡೇರಿಸಿಕೊಳ್ಳುವ ಭರದಲ್ಲಿ ಅಡ್ಡದಿಡ್ಡಿ ಸಾಗುತ್ತಿರುತ್ತೇವೆ. ನಮಗೂ ಸ್ವತಃ ಅದರ ಅರಿವೇ ಇಲ್ಲವಾಗಿರುತ್ತದೆ. ಆದರೆ ನಮ್ಮೆಲ್ಲ ಆಟವನ್ನು ನೋಡುತ್ತಾ ಕೂರುವ ವಿಧಿ ಸರಿಯಾದ ಸಮಯಕ್ಕೆ ಕಾದು ನಮ್ಮ ನಾಗಾಲೋಟಕ್ಕೆ ಬ್ರೇಕ್ ಹಾಕಿ ಕೂರಿಸಿಬಿಡುತ್ತದೆ..!

ಹೌದು., ನಮ್ಮ ಹಾದಿ ತಪ್ಪಿದ ನೋಟ ಎಚ್ಚರಿಸಲೆಂದೆ ಬದುಕು ಆಗಾಗ ಒಂದಷ್ಟು ತಿರುವುಗಳ ಎದುರು ನಿಲ್ಲಿಸಿ ನಮ್ಮನ್ನು ಕಾಡುವುದು. ಕೆಣಕುವುದು. ಆಗಲೂ ಎಚ್ಚೆತ್ತುಕೊಳ್ಳದಿದ್ದರೆ, ಜೀವನ ಪಾತಾಳ ಸೇರುವುದು ನಿಶ್ಚಿತ. ಇತ್ತೀಚಿಗೆ ನನ್ನ ಆತ್ಮೀಯ ವರ್ಗದವರೊಬ್ಬರ ಸಲುವಾಗಿ ಒಂದಷ್ಟು ದಿನಗಳ ಆಸ್ಪತ್ರೆ ವಾಸ ಅನುಭವಿಸಬೇಕಾಗಿ ಬಂತು. ಆಸ್ಪತ್ರೆ ವಾಸ, ನಿತ್ಯ ನರಕವೋ ಅಥವಾ ಸಂಬಂಧಗಳ ನೆಲೆ-ಬೆಲೆ ತಿಳಿಸುವ ಅನುಭವ ಮಂಟಪವೊ ತಿಳಿಯದಾಯಿತು. ಚಿಕ್ಕ ಚಿಕ್ಕ ಕಾರಣಗಳ ಹುಡುಕಿ ದೂರಾಗುತ್ತಿರುವ ಎಷ್ಟೋ ಸಂಬಂಧಗಳ ನಡುವೆ, ಚರ್ಮ ಸುಕ್ಕುಗಟ್ಟಿ ಎಲ್ಲ ಬಾಹ್ಯ ಆಕರ್ಷಣೆ ಕಳೆದುಕೊಂಡರು, ಎಂದಿಗೂ ಬತ್ತದ ಆಂತರ್ಯದ ಮಮತೆಯ ಸೆಲೆಯೊಳಗೆ ಬಂಧಿಯಾಗಿ, ಎಷ್ಟೇ ಏಳು ಬೀಳುಗಳು ಬಂದರೂ ಜೊತೆಯಾಗಿ ಜೀವನ ಸವೆಸೋಣ ಎನ್ನುವಂತ ಮಾಗಿದ ಜೀವಗಳು ಕಾಣಲು ಸಿಕ್ಕರು. ಹಣವಿದೆ, ಹೆಸರಿದೆ, ಸೌಂದರ್ಯವಿದೆ ನನಗೇನು ಕೊರತೆ ಎಂದು ಯಾವ ದೇಹಾಭಿಮಾನದಿಂದ ಮೆರೆದಾಡಿದರೋ, ಅವರು ಅದೇ ದೇಹಾರೋಗ್ಯ ಕೊಟ್ಟ ಒಂದು ಸಣ್ಣ ಹೊಡೆತಕ್ಕೆ ನಲುಗಿ, ಅಹಂಕಾರವೆಲ್ಲ ಪಾತಾಳಕ್ಕಿಳಿದು ಮಗುವಂತಾದವರು ಸಿಕ್ಕರು. ಹೆತ್ತವರನ್ನು ಸಾಕಲಾರದೆ ವೃದ್ಧಾಶ್ರಮಕ್ಕೆ ಸೇರಿಸುವ, ಸುಮ್ಮನೆ ಯಾವುದೊ ದರ್ದಿಗಾಗಿ ಹೆತ್ತು ಅನಾಥಾಶ್ರಮಕ್ಕೆ ಮಕ್ಕಳನ್ನು ಬಿಟ್ಟು ಹೋಗುವವರ ನಡುವೆ, ತಮ್ಮೆಲ್ಲ ಜವಾಬ್ದಾರಿ ಅಥವಾ ಕರ್ತವ್ಯಗಳನ್ನು ನಿಷ್ಠೆಯಿಂದ ಹೆಗಲಿಗೆ ತೆಗೆದುಕೊಂಡು ವಯಸ್ಸಾದ ಅಪ್ಪನೋ ಅಮ್ಮನನ್ನೋ ಜೋಪಾನ ಮಾಡಿಕೊಳ್ಳಲು ಒದ್ದಾಡುವವರು, ಹೆತ್ತ ಕಂದಮ್ಮ ಕಣ್ಣೆದುರಿಗೇ ರೋಗದಿಂದ ನರಳುವಾಗ, ಬಂದ ಕಣ್ಣೀರು ತಡೆದು ನೋವ ನುಂಗುತ್ತಾ, ಅದನ್ನು ಉಳಿಸಿಕೊಳ್ಳಲು ಹೋರಾಡುವವರು, ಇನ್ನು ಪ್ರೀತಿಯೆಳೆಯಲ್ಲಿ ಬಂಧಿಯಾಗಿ ಏರು ಯೌವನದಲ್ಲಿ ಕೈ ಕೈ ಹಿಡಿದು ಓಡಾಡುವ ಆಸೆಯಲ್ಲಿದ್ದವರು ಬಂದೊದಗಿದ ಅರೋಗ್ಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಹವಣಿಸುತ್ತ ಅಲೆಯುವವರು ಸಿಕ್ಕರು.

ಅದರಲ್ಲಿ ಸಮಾಜದ ಕಟ್ಟುಪಾಡುಗಳಿಗೆ ಸೋತೋ ಅಥವಾ ಹೆದರಿಯೋ ಬಂದಿದ್ದವರೆಷ್ಟೋ. ಅದೇನೇ ಆದರೂ, ಕಾರಣಗಳ ಹುಡುಕಿ ತೊರೆದು ಹೊರಡುವವರ ನಡುವೆ ತೊರೆಯಲು ಸಾಕಷ್ಟು ಕಾರಣಗಳಿದ್ದಾಗಿಯೂ ಉಳಿದು ಜೊತೆ ನಡೆಯುವವರು, ಬದುಕು ನಮಗೆ ಕೊಟ್ಟ ದೊಡ್ಡ ಉಡುಗೊರೆ ಅನ್ನಿಸಿತು. ಆಸ್ಪತ್ರೆ ನಿಜಕ್ಕೂ ನಮ್ಮ ಬದುಕಿನಲ್ಲಿ ನಮ್ಮವರು ಎನ್ನಿಸಿಕೊಳ್ಳುವವರೆಲ್ಲರ ನಿಜವಾದ ಮುಖಗಳ ಪರಿಚಯಿಸುವ ತಾಣ ಎನ್ನಿಸಿತು. ಅರೋಗ್ಯವೇ ಮಹಾಭಾಗ್ಯ ಎಂಬುದರ ಅರಿವಾಯಿತು. ಬರೀ ಸುಖವಿದ್ದಾಗಲಷ್ಟೇ ಸಖ್ಯವಲ್ಲ, ನಮ್ಮವರ ಅಸಹಾಯಕತೆಯಲ್ಲಿ ಜೊತೆ ನಿಂತು' ನಿನಗಾಗಿ ನಾನಿದ್ದೇನೆ' ಎನ್ನುವ ಬೆಚ್ಚನೆಯ ಸ್ಪರ್ಶಕ್ಕೆ ಎಷ್ಟು ಮಹತ್ವವಿದೆ ಎಂಬುದರ ಅರಿವು ಮೂಡಿಸಿತು.



ಬದುಕು ಎದುರಾಗಿಸುವ ಸತ್ಯಗಳನ್ನು ಕೆಲವೊಮ್ಮೆ ಮೌನವಾಗಿ ಒಪ್ಪಿ ಅಪ್ಪಿದರೆ ಸಾಗುವ ಹಾದಿ ತುಂಬಾ ಅನುಭವದ ಕಂದೀಲು ಸಿಕ್ಕೀತು. ಸ್ನೇಹಿತರೆ ನಾವ್ಯಾರು ಇಲ್ಲಿಗೆ ನೂರುಕಾಲ ಬದುಕೇ ತೀರುತ್ತೇವೆ ಎಂಬ ಒಪ್ಪಂದ ಮಾಡಿಕೊಂಡು ಬಂದಿಲ್ಲ, ಎಲ್ಲರ ಜೀವನವೂ ಕ್ಷಣಿಕವೇ. ಅಂದಮೇಲೆ ನಮ್ಮ ಸ್ವಾರ್ಥ ಮತ್ತು ಸಂಕುಚಿತ ಮನೋಭಾವದ ಪರದೆ ಸರಿಸಿ, ಕೊಂಚ ಸುತ್ತಲಿನ ಪರಿವಾರ, ಪರಿಸರದೆಡೆಗೂ ಮಿಡಿಯೋಣ. ಸುಖದಂತೆಯೇ ದುಃಖವನ್ನೂ ಸಮತೋಲನದಿಂದ ಸ್ವೀಕರಿಸಿ ಜೀರ್ಣಸಿಕೊಳ್ಳುವುದ ಕಲಿಯೋಣ. ನಮಗೀಗ ದಕ್ಕಿರುವ ಚೆಂದದ ಬದುಕು ನಮ್ಮ ಹೆತ್ತವರ ಮತ್ತು ಎಷ್ಟೋ ಕಾಣದ ಕೈಗಳ ಪ್ರಾರ್ಥನೆಯ ಫಲ. ಈ ಬದುಕು ಆಶೀರ್ವಾದಗಳ ಸಂತೆ. ಆದ್ದರಿಂದ ನಮಗೀಗ ಕೊಡುತ್ತಿರುವ ಎಲ್ಲ ಸವಲತ್ತು ಮತ್ತು ಸಂತೋಷಕ್ಕೂ ಯೂನಿವರ್ಸ್ ಗೊಂದು ಪ್ರೀತಿಯ ಧನ್ಯವಾದ ಹೇಳುತ್ತಾ, ಕೃತಜ್ಞತೆಯಿಂದ ಬಾಳಿ ವಿದಾಯ ಹೇಳುವಾಗ ಅಷ್ಟೇ ಚೆಂದವಾಗಿ ನೆಮ್ಮದಿಯಿಂದ ಎದ್ದು ಹೋಗೋಣ.. ಏನಂತೀರಿ..?

– ಪಲ್ಲವಿ ಚನ್ನಬಸಪ್ಪ

# ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಪ್ರಯತ್ನಿಸಿ

## ಡಿಸಿ ನಲಿನ್ ಅತುಲ್ ಹೇಳಿಕೆ | ಡಿಸಿ, ಜಿಪಂ ಸಿಇಒ, ಎಸ್ಪಿ ಸಮ್ಮುಖದಲ್ಲಿ ಅರ್ಜಿಗಳ ವಿಲೇವಾರಿ

■ ಹಂಪಿ ಟೈಮ್ಸ್ ಕೊಪ್ಪಳ

ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಸಾರ್ವಜನಿಕ ಅಹವಾಲುಗಳಿಗೆ ತ್ವರಿತವಾಗಿ ಸ್ಪಂಧಿಸುವದರ ಮೂಲಕ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸುವಂತೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾರಟಗಿ ತಾಲೂಕಿನ ಸಿದ್ದಾಪುರ ಗ್ರಾಮದ ಎಪಿಎಂಸಿ ಆವರಣದಲ್ಲಿ ಆಗಸ್ಟ್ 06ರಂದು ನಡೆದ ಜನಸ್ಪಂದನ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಿ ಅಹವಾಲುಗಳನ್ನು ಆಲಿಸಿ, ಮಾತನಾಡಿದರು.

ಸರ್ಕಾರದ ನಿರ್ದೇಶನದನ್ವಯ ಸಾರ್ವಜನಿಕರ ಕುಂದು-ಕೊರತೆಗಳನ್ನು ಶೀಘ್ರವಾಗಿ ಪರಿಹರಿಸುವ ನಿಟ್ಟಿನಲ್ಲಿ ತಾಲ್ಲೂಕು ಮಟ್ಟದಲ್ಲಿ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಕೆಲಸಗಳಿಗಾಗಿ ಕಚೇರಿಗಳಿಗೆ ಜನರ ಅಲೆದಾಟ ತಡೆಯುವುದು ಹಾಗೂ ಸಾರ್ವಜನಿಕರ ಹೊರೆ ತಡೆಯುವ ಉದ್ದೇಶ ಈ ಕಾರ್ಯಕ್ರಮದ್ದಾಗಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತ ಪರಿಹಾರದ ಜೊತೆಗೆ ಸಕಾಲದಲ್ಲಿ ಸೇವೆಗಳು ಸಿಗುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕರ ಅರ್ಜಿ, ಅಹವಾಲುಗಳಿಗೆ ತಕ್ಷಣವೇ ಸ್ಪಂಧಿಸಿ ಪರಿಹಾರ ನೀಡಲು ಕ್ರಮ ವಹಿಸುವಂತೆ ಸೂಚನೆ ನೀಡಿದರು.

ಈ ಹಿಂದೆ ಜಿಲ್ಲೆಯ ಕನಕಗಿರಿ ಮತ್ತು ಕುಕನೂರ ತಾಲ್ಲೂಕುಗಳಲ್ಲಿ ನಡೆಸಿದ ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕೃತವಾದ ಅರ್ಜಿಗಳಿಗೆ ತ್ವರಿತವಾಗಿ ಪರಿಹಾರ ಕಲ್ಪಿಸಿ ಜನತೆಗೆ ಸ್ಪಂದನೆ ನೀಡಲಾಗಿದೆ. ಅದೇ ರೀತಿ ಕಾರಟಗಿ ತಾಲೂಕಿನ ಸಿದ್ದಾಪುರದಲ್ಲಿ ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ವರ್ಗಾಯಿಸಿ ಪರಿಹಾರ ಕಲ್ಪಿಸಲಾಗುವುದು ಎಂದು ತಿಳಿಸಿದರು.




ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ ಅವರು ಮಾತನಾಡಿ, ಜನಸ್ಪಂದನ ಕಾರ್ಯಕ್ರಮದಲ್ಲಿ ಜನರು ಸಲ್ಲಿಸಿದ ಅರ್ಜಿಗಳಿಗೆ ಅಲ್ಪಕಾಲದಲ್ಲಿಯೇ ಪರಿಹಾರ ಒದಗಿಸಲಾಗುವುದು. ಈ ಎಲ್ಲಾ ಅರ್ಜಿಗಳ ಮಾಹಿತಿಯನ್ನು ಐ.ಪಿ.ಜಿ.ಆರ್.ಎಸ್.ನಲ್ಲಿ ಅಪ್ಲೋಡ್ ಮಾಡಲಾಗುವುದು. ಇದರಿಂದ ಸಾರ್ವಜನಿಕರು ತಮ್ಮ ಅರ್ಜಿಯ ಸ್ಥಿತಿಯ ಬಗ್ಗೆ ಆನ್‌ಲೈನ್ ಮೂಲಕ ಪರಿಶೀಲಿಸಬಹುದಾಗಿದೆ ಎಂದರು.

ಸಮಾರಂಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ರಾಮ್ ಎಲ್ ಅರಸಿದ್ದಿ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಕಾರಟಗಿ ತಹಸೀಲ್ದಾರರಾದ ಎಂ.ಕುಮಾರ ಸ್ವಾಮಿ, ತಾಪಂ ಇಓ ಲಕ್ಷ್ಮೀದೇವಿ ಯಾದವ್, ಗ್ರಾ.ಪಂ ಅಧ್ಯಕ್ಷರಾದ ಶ್ರೀಮತಿ ಶಿವಗಂಗಮ್ಮ ಪಂಪಾಪತಿ ಭೋವಿ, ಉಪಾಧ್ಯಕ್ಷರಾದ ಗಂಗಪ್ಪ ಸುಂಕದ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಸಾರ್ವಜನಿಕರಿಂದ ವಿವಿಧ ಅರ್ಜಿ, ಮನವಿ ಸಲ್ಲಿಕೆ: ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಕೃಷ್ಣಪ್ಪ ಅವರು ಹುಳ್ಕಿಹಾಳ ಸರಕಾರಿ ಪ್ರೌಢ ಶಾಲೆಯ ಜಾಗವನ್ನು ಬೇಗನೆ ಹದ್ದುಬಸ್ತು ಮಾಡಿ ಕೊಡುವಂತೆ ಮನವಿ ಸಲ್ಲಿಸಿದರು. ಸಿದ್ದಾಪುರದ ಪ್ರವೀಣ ಕುಮಾರ ಅವರು ಸಿದ್ದಾಪುರ ಗ್ರಾಮಕ್ಕೆ ಒಂದು ರಾಷ್ಟ್ರೀಕೃತ ಬ್ಯಾಂಕ್ ಶಾಖೆಯನ್ನು ಮಂಜೂರು ಮಾಡುವಂತೆ ಮನವಿ ಮಾಡಿದರು. ಮುಸ್ಟೂರ ಗ್ರಾಮದ ಲಕ್ಷ್ಮಮ್ಮ, ರಾಣಿ, ವೆಂಕಟರಮಣಪ್ಪ, ಯಮನಮ್ಮ, ಚಿಕ್ಕ ಸೂರ್ಯ ರಾವ್ ಅವರು ಸಂಧ್ಯಾ ಸುರಕ್ಷಾ ಮಾಸಶನಕ್ಕೆ ಅರ್ಜಿ ಸಲ್ಲಿಸಿದರೆ, ಯಂಕಮ್ಮ ಅವರು ನಿರ್ಗತಿಕ ವಿಧವಾ ವೇತನಕ್ಕಾಗಿ ಅರ್ಜಿ ಸಲ್ಲಿಸಿದರು. ಶಾಲಿಗನೂರು ಗ್ರಾಮದ ನಾಗರಾಜ ಹೊಸಮನಿ ಅವರು ತಮ್ಮ ಜಮೀನಿನ ಪಹಣಿ ಪತ್ರಿಕೆಯಲ್ಲಿನ ಲೋಪ ದೋಷಗಳನ್ನು ಸರಿಪಡಿಸುವಂತೆ, ಯರಡೋಣ ಗ್ರಾಮದ ಎ.ಸಂಜೆಮ್ಮ ಅವರು ತಮ್ಮ ಹೆಸರಿಗೆ ಜಮೀನು ವರ್ಗಾವಣೆ ಮಾಡುವ ಕುರಿತಂತೆ ಹಾಗೂ ಇತರ ಗ್ರಾಮಸ್ಥರು ಪೌತಿ ಖಾತೆ, ಪಹಣಿ ತಿದ್ದುಪಡಿ ಸೇರಿದಂತೆ ನಾನಾ ಬೇಡಿಕೆಗಳ ಈಡೇರಿಕೆಗಾಗಿ ಅರ್ಜಿ ಸಲ್ಲಿಸಿದರು.

ಪಿಂಚಣಿ ಸೌಲಭ್ಯ ಸೇರಿದಂತೆ ಕೆಲವೊಂದನ್ನು ಅಹವಾಲುಗಳಿಗೆ ಜಿಲ್ಲಾಧಿಕಾರಿಗಳು ಸ್ಥಳದಲ್ಲಿಯೇ ಪರಿಹರಿಸಿದರು.

# ಆಗಸ್ಟ್ 8ರಂದು ಕಾನೂನು ಅರಿವು ನೆರವು ಕಾರ್ಯಕ್ರಮ

■ ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹೊಸಪೇಟೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವನಿಕ ಸಂಪರ್ಕ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಗಸ್ಟ್ 8ರಂದು ಬೆಳಗ್ಗೆ 9 ಗಂಟೆಗೆ ಹೊಸಪೇಟೆಯ ವಾಸವಿ ಪ್ರೌಢ ಶಾಲೆಯಲ್ಲಿ ಬಾಲ್ಯ ವಿವಾಹ ನಿಷೇಧ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆ-2012ರ ಕಾನೂನು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಮೇಶ್ ಬಾಬು ಬಿ.ಎನ್ ಕಾರ್ಯಕ್ರಮವನ್ನು ಉಧ್ಘಾಟಿಸುವರು, ವಾಸವಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಯ ಡಾ. ಯತ್ನಳ್ಳಿ ಮಲ್ಲಯ್ಯ ಇವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಹೊಸಪೇಟೆಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ್ ನಾಗಲಾಪುರ್, ವಕೀಲರ ಸಂಘದ ಅಧ್ಯಕ್ಷರಾದ ಕೆ. ಪ್ರಹ್ಲಾದ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪಿ. ಶ್ರೀನಿವಾಸಮೂರ್ತಿ, ಕ್ಷೇತ್ರ ಶಿಕ್ಷಣ ಇಲಾಖೆಯ ಚನ್ನಬಸಪ್ಪ., ಗ್ರಾಮೀಣ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷರಾದ ಗುರುರಾಜ್ ಕಟ್ಟಿಮನಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಸಿಂಧು ಅಂಗಡಿ, ಕಾನೂನು ಪರಿವೀಕ್ಷಣಾಧಿಕಾರಿಗಳಾದ ಶ್ರೀಕಾಂತ್ ಉಪಸ್ಥಿತರಿರುವರು ಎಂದು ತಿಳಿಸಿದೆ.

# ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ವಿವಿಧ ಇಲಾಖೆಗಳಿಗೆ ಸಾರ್ವಜನಿಕರು ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡದಿರುವ ಕುರಿತು ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಮಾರ್ಗದರ್ಶನದಲ್ಲಿ ಡಿಎಸ್‌ಪಿ ಆರ್. ವಸಂತ್‌ಕುಮಾರ್ ಮತ್ತು ಪೊಲೀಸ್ ನಿರೀಕ್ಷಕರಾದ ಮಹಮ್ಮದ್ ರಫಿ, ಸಂಗಮೇಶ್ ನೇತೃತ್ವದಲ್ಲಿ ಕಂಪ್ಲಿ, ಸಿರುಗುಪ್ಪ ಮತ್ತು ಬಳ್ಳಾರಿ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಯಕ್ರಮ ನಡೆಯಲಿದೆ.

**ಅಹವಾಲು ಸ್ವೀಕರಿಸುವ ದಿನ ಮತ್ತು ಸ್ಥಳ:** ಆ.12 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಕಂಪ್ಲಿಯ ತಹಶೀಲ್ದಾರರ ಕಚೇರಿ ಸಭಾಂಗಣ, ಆ.14 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಿರುಗುಪ್ಪದ ಸಿಡಿಪಿಓ ಕಚೇರಿ ಸಭಾಂಗಣ ಮತ್ತು ಆ.21 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಬಳ್ಳಾರಿ ನಗರದ ಹೊಸ ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ.01 ಮತ್ತು 02 ಗಳನ್ನು ಸಹ ನೀಡಲಾಗುವುದು. ಕುಂದು ಕೊರತೆಗಳಿರುವ ಸಾರ್ವಜನಿಕರು ದೂರು ಅರ್ಜಿ ನೀಡಬಹುದು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ। ಸಂವತ್ಸರ: ಕ್ರೋಧಿ

**07–08–2024 – ಬುಧವಾರ**

| | |
|---|---|
| ತಿಥಿ | : ತೃತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವ(ಫಾಲ್ಗುಣಿ) |
| ಯೋಗ | : ಪರಿಘ |
| ಕರಣ | : ತೈತುಲ |
| ಸೂರ್ಯೋದಯ | : 06:01:19 |
| ಸೂರ್ಯಾಸ್ತ | : 19:03:42 |
| ರಾಹು | : 12:33–14:10 |
| ಯಮಘಂಡ | : 07:39–09:17 |
| ಗುಳಿಕ | : 10:55–12:33 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 06–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.14 ಅಡಿ |
| ಒಳ ಹರಿವು | 84696 ಕ್ಯುಸೆಕ್ |
| ಹೊರ ಹರಿವು | 55227 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 102.335 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1627.56 ಅಡಿ |
| ಒಳ ಹರಿವು | 11200 ಕ್ಯುಸೆಕ್ |
| ಹೊರ ಹರಿವು | 5941 ಕ್ಯುಸೆಕ್ |
| ಸಾಮರ್ಥ್ಯ | 85.184 ಟಿಎಂಸಿ |

# ಶಾಲಾ ಮಕ್ಕಳು ಶಿಕ್ಷಣದ ಜೊತೆಗೆ ಆರೋಗ್ಯದ ಅರಿವು ಹೊಂದಬೇಕು

### ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ಹೇಳಿಕೆ | ಆರೋಗ್ಯ ಸಿಂಚನ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ

ಮಕ್ಕಳು ಶಾಲೆಯಲ್ಲಿ ಶಿಕ್ಷಣ ಪಡೆಯುವುದಲ್ಲದೇ ಆರೋಗ್ಯ ಕಾರ್ಯಕ್ರಮಗಳ ಶಿಕ್ಷಣದ ಅರಿವು ಹೊಂದಬೇಕು. ಈ ಮೂಲಕ ವಿದ್ಯಾರ್ಥಿಗಳು ಎಲ್ಲಾ ವಿಷಯವನ್ನು ತಿಳಿದುಕೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮತ್ತು ಗ್ರಾಮ ಪಂಚಾಯತಿಗಳ ಸಹಯೋಗದೊಂದಿಗೆ ಬಳ್ಳಾರಿ ತಾಲ್ಲೂಕಿನ ಕೊಳಗಲ್ಲು ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಮಂಗಳವಾರ ಏರ್ಪ ಡಿಸಿದ್ದ "ಆರೋಗ್ಯ ಸಿಂಚನ" ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ರಾಜ್ಯದಲ್ಲಿಯೇ ಬಳ್ಳಾರಿ ಜಿಲ್ಲೆಯಲ್ಲಿ "ಆರೋಗ್ಯ ಸಿಂಚನ" ಕಾರ್ಯಕ್ರಮದಡಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ 713 ಶಾಲೆಗಳಲ್ಲಿ 7 ರಿಂದ 10 ನೇ ತರಗತಿ ಓದುತ್ತಿರುವ ಎಲ್ಲಾ ಸರ್ಕಾರಿ ಅನುದಾನಿತ, ಅನುದಾನ ರಹಿತ ಶಾಲಾ ಮಕ್ಕಳಿಗೆ ಆರೋಗ್ಯ ಜಾಗೃತಿ ಮೂಡಿಸುವ 'ಆರೋಗ್ಯ ಸಿಂಚನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಇಂದಿನ ಪೀಳಿಗೆಯು ಸದೃಢವಾಗ ಬೇಕೆಂದರೆ ಶಾಲಾ ಮಕ್ಕಳು ಆರೋಗ್ಯದ ಬಗ್ಗೆ ಹೆಚ್ಚು ಅರಿವು ಮತ್ತು ಜಾಗೃತಿ ಹೊಂದಬೇಕು. ಹಾಗೆಯೇ ತಮ್ಮ ನೆರೆಹೊರೆ ಯವರಿಗೂ ಇದರ ಕುರಿತು ತಿಳಿಸಬೇಕು ಎಂದು ಕಿವಿಮಾತು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್‌ಬಾಬು




ಮಾತನಾಡಿ, ಮಕ್ಕಳಲ್ಲಿ ಆರೋಗ್ಯ ಜಾಗೃತಿ ನೀಡುವುದರ ಜೊತೆಗೆ ಡೆಂಗ್ಯು, ಕ್ಷಯರೋಗ, ಕುಷ್ಠರೋಗ, ಬಾಲ್ಯವಿವಾಹ, ಋತುಚಕ್ರ ನಿರ್ವಹಣೆ, ಕೈತೊಳೆಯುವ ವಿಧಾನಗಳು, ತ್ಯಾಜ್ಯ ನಿರ್ವಹಣೆಗಳ ಮಾಹಿತಿ ಪ್ರತಿ ಯೊಬ್ಬರೂ ಪಡೆಯಬೇಕು. ಡೆಂಗ್ಯೂ, ಚಿಕಿನ್ ಗುನ್ಯಾ ಮುಂತಾದ ಸೊಳ್ಳೆಗಳಿಂದ ಹರಡುವ ಕಾಯಿಲೆಗಳ ಕುರಿತು ಜನಜಾಗೃತಿ, ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು 17 ವಿಡಿಯೋ ತುಣುಕುಗಳನ್ನು ಸಿದ್ಧಪಡಿ ಸಲಾಗಿದ್ದು, ಶಾಲಾ ಮಕ್ಕಳಿಗೆ ಪ್ರದರ್ಶಿಸುವ ಕಾರ್ಯಕ್ರಮ ಇದಾಗಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್ ಮಾತನಾಡಿ, ಬಾಲ್ಯ ವಿವಾಹ ನಿಷೇಧ ಹಾಗೂ ಬಾಲ್ಯ ವಿವಾಹದಿಂದ ಉಂಟಾಗುವ ಮಾರಕ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳು ಅರಿವು ಹೊಂದಬೇಕು. ನಿಮ್ಮ ಸುತ್ತಮುತ್ತಲಿನಲ್ಲಿ ಬಾಲ್ಯ ವಿವಾಹಗಳು ನಡೆಯುವುದು ಕಂಡು ಬಂದಲ್ಲಿ 1098 ಗೆ ಕರೆ ಮಾಡಿ ತಿಳಿಸಬಹುದು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು, ಆರೋಗ್ಯ ಜಾಗೃತಿ ಕಾರ್ಯಕ್ರಮಗಳ ಕುರಿತು ಶಾಲಾ ಮಕ್ಕಳೊಂದಿಗೆ ಸಂವಾದ ನಡೆಸಿದರು.

ನಂತರದಲ್ಲಿ ವಿದ್ಯಾರ್ಥಿಗಳಿಗೆ ಹದಿಹರೆಯದ ಆರೋಗ್ಯ, ಬಾಲ್ಯವಿವಾಹ ದುಷ್ಪರಿಣಾಮಗಳು, ಡೆಂಗ್ಯೂ, ಕಾಲರಾ, ಕ್ಷಯರೋಗ, ತ್ಯಾಜ್ಯ ನಿರ್ವಹಣೆ, 108 ಅಂಬ್ಯುಲೆನ್ಸ್, ಅನೀ ಮಿಯಾ, ಐಯೋಡಿನ್ ಮುಂತಾದವು ಸೇರಿದಂತೆ 17 ವಿಡಿಯೋ ತುಣುಕುಗಳನ್ನು ಪ್ರದರ್ಶಿಸಲಾಯಿತು.

ಈ ವೇಳೆ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆನಾಗಪ್ಪ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮೋಹನಕುಮಾರಿ, ಕೊಳಗಲ್ಲು ಏಕಲವ್ಯ ಮಾದರಿ ವಸತಿ ಶಾಲೆಯ ಪ್ರಾಚಾರ್ಯರಾದ ಅಮೃತ, ಕುರುಗೋಡು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಮಂಜುನಾಥ ಜವಳಿ, ಸಿದ್ದಮ್ಮನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ದಿವ್ಯಾ, ಬಳ್ಳಾರಿ ತಾಲ್ಲೂಕು ಅಂಗನವಾಡಿ ಮೇಲ್ವಿಚಾರಕಿ ಕಲ್ಯಾಣಮ್ಮ, ಕುರುಗೋಡು ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ರಾಜುಶೆಟ್ಟಿ, ಕೊಳಗಲ್ಲು ಗ್ರಾಪಂ ಅಭಿವೃದ್ಧಿ ಅಧಿಕಾರಿ ಶೇಕ್ಷಾವಲಿ ಸೇರಿದಂತೆ ಆಶಾ ಕಾರ್ಯಕರ್ತೆಯರು, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇನ್ನಿತರರಿದ್ದರು.

# ಅಂತರಾಷ್ಟ್ರೀಯ ಕರಾಟೆ ಸ್ಪರ್ಧೆಯಲ್ಲಿ ಸ್ವಾತಿ ವಿಜೇತೆ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ



ತಾಲೂಕಿನ ಹೊಳೆ ಮುತ್ಕೂರು ಗ್ರಾಮದ ಕ್ರೀಡಾಪಟು ಸ್ವಾತಿ ಈಶಪ್ಪ ಕಡಾಕಡಿ ರವಿವಾರ ಶಿವಮೊಗ್ಗದಲ್ಲಿ ನಡೆದ ಅಂತರಾಷ್ಟ್ರೀಯ ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಿವ ಮೂಲಕ ವಿಜೇತರಾಗಿದ್ದಾರೆ. ಈ ಸ್ಪರ್ಧೆಯಲ್ಲಿ ನಾನಾ ರಾಜ್ಯ ಮತ್ತು ದೇಶಗಳಿಂದ ಆಗಮಿಸಿದ ಕರಾಟೆ ಪಟುಗಳ ಭಾಗವಹಿಸಿದ್ದರು. ಅದರಲ್ಲಿ ಮುಂಡರಿಗಿಯ ಮಂಜು ಡೈಮಂಡ್ ಮಿಕ್ಸ್ ಮಾರ್ಷಲ್ ಆರ್ಟ್ ಅಕಾಡೆಮಿಯ ಕರಾಟೆ ಕ್ರೀಡಾಪಟು ಸ್ಪರ್ಧೆಯಲ್ಲಿ ಸ್ವಾತಿ ಕಡಾಕಡಿ ಭಾಗವಹಿಸಿ ವಿಜಯಿಯಾದರು. ಕಟಾ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದರು. ಇದರಿಂದ ಗ್ರಾಮಕ್ಕೆ ಕೀರ್ತಿ ತಂದರು. ಈ ವೇಳೆ ತರಬೇತುದಾರರಾದ ಮಾಸ್ಟರ್ ಟಿ.ಭಜಂತ್ರಿ ಮಂಜುನಾಥ್ ಮತ್ತು ರಾಜೇಶ್ರೀ ಮಂಜು ಭಜಂತ್ರಿ ಮತ್ತಿತರರು ಇದ್ದರು.

# ಸುಭಾಸ್ ಚಂದ್ರ ಬೋಸ್ ಸ್ಕೌಟ್ಸ್ ಘಟಕದ ವಿದ್ಯಾರ್ಥಿಗಳಿಗೆ ದೀಕ್ಷಾ



■ ಹಂಪಿ ಟೈಮ್ಸ್ ಕೊಪ್ಪಳ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಪ್ಪಳ ಜಿಲ್ಲಾ ಸಂಸ್ಥೆಯಿಂದ ತಾಲ್ಲೂಕಿನ ಕಿನ್ನಾಳ ಗ್ರಾಮದ ಕುವೆಂಪು ಶತಮಾನೋತ್ಸವ ಮಾದರಿಯ ಶಾಲೆಯಲ್ಲಿ ಆಗಸ್ಟ್ 06ರಂದು ಸುಭಾಸ್ ಚಂದ್ರ ಬೋಸ್ ಸ್ಕೌಟ್ಸ್ ಘಟಕದ ವಿದ್ಯಾರ್ಥಿಗಳಿಗೆ "ದೀಕ್ಷಾ ಸಮಾರಂಭ" ಕಾರ್ಯಕ್ರಮ ನಡೆಯಿತು.

ಶಾಲೆಯ ಸ್ಕೌಟ್ಸ್ ಶಿಕ್ಷಕರಾದ ಪ್ರಭಾಕರ್ ದಾಸರ್ ಅವರು ವಿದ್ಯಾರ್ಥಿಗಳಿಗೆ ದಿಕ್ಷಾ ನಿಡಿದರು. ಜಿಲ್ಲಾ ಕಾರ್ಯದರ್ಶಿಗಳು ಮತ್ತು ಶಾಲೆಯ ಮುಖ್ಯ ಗುರುಗಳಾದ ಮಾರುತಿ ಅರೇರ್ ಕಾರ್ಯಕ್ರಮ ಕುರಿತು ಮಾತನಾಡಿ ಘಟಕಕ್ಕೆ ಸೇರಿದ ಎಲ್ಲಾ ಸ್ಕೌಟ್ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಕೊಪ್ಪಳ ಎ.ಎಸ್.ಓ.ಸಿ ಶರೀಫ್ ಹತ್ತಿಮತ್ತೂರ್, ಶಾಲೆಯ ಗೈಡ್ಸ್ ಶಿಕ್ಷಕಿ ಬಸಮ್ಮ ಗುಜ್ಜಲ್, ಶಾಲೆಯ ಎಲ್ಲಾ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಮೆಟ್ರಿಕ್ ನಂತರದ ಎಸ್ಸಿ ಎಸ್ಟಿ ಬಾಲಕರ ವಿದ್ಯಾರ್ಥಿ ನಿಲಯ ಮಂಜೂರಿಗೆ ಆಗ್ರಹ

■ ಹಂಪಿ ಟೈಮ್ಸ್ ಹೊಸಪೇಟೆ

ಹಗರಿಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ(ಪ.ಜಾ/ಪ.ಪಂ) ಮಂಜೂರು ಮಾಡಬೇಕೆಂದು ಒತ್ತಾಯಿಸಿ ಜಿಪಂ ಮಾಜಿ ಸದಸ್ಯ ಅಕ್ಕಿ ತೋಟೇಶ ಇತರರು ಸಮಾಜ ಕಲ್ಯಾಣಾಧಿಕಾರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಶೈಕ್ಷಣಿಕವಾಗಿ ತಂಬ್ರಹಳ್ಳಿ ಗ್ರಾಮ ಪ್ರಸಿದ್ಧಿ ಹೊಂದಿದೆ. ಗ್ರಾಮದ ಸುತ್ತಮುತ್ತಲಿನ ಸುಮಾರು 25 ಹಳ್ಳಿಗಳಿಂದ ಪ.ಜಾತಿ ಮ್ತು ಪ.ಪಂಗಡಗಳ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಈಗಿರುವ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಸುಮಾರು 200 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯವಿಲ್ಲದ್ದರಿಂದ ಬೇರೆ ಊರುಗಳಿಗೆ ಹೋಗಲಾಗದೇ ಶಿಕ್ಷಣವನ್ನು



ಮೊಟಕುಗೊಳಿಸುತ್ತಿದ್ದಾರೆ. ತಂಬ್ರಹಳ್ಳಿಯಲ್ಲಿ ಕಳೆದ 26 ವರ್ಷಗಳಿಂದ ಪದವಿಪೂರ್ವ ಕಾಲೇಜಿನಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುತ್ತಿದ್ದು, ಮಕ್ಕಳು ಶಿಕ್ಷಣವನ್ನು ಮುಂದುವರೆಸಲು ಅನುಕೂಲವಾಗುವಂತೆ ತಂಬ್ರಹಳ್ಳಿ ಗ್ರಾಮಕ್ಕೆ ಹೊಸದಾಗಿ ಸಮಾಜ ಕಲ್ಯಾಣ ಇಲಾಖೆಯವತಿಯಿಂದ ಎಸ್ಸಿ–ಎಸ್ಟಿ ಬಾಲಕರ ವಿದ್ಯಾರ್ಥಿ ನಿಲಯ ನಿರ್ಮಿಸಲು ಸೂಕ್ತ ಸ್ಥಳಾವಕಾಶವಿದ್ದು, ಸಂಬಂಧಿಸಿದ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು ವಿದ್ಯಾರ್ಥಿ ನಿಲಯ ಮಂಜೂರು ಮಾಡಬೇಕು ಎಂದು ಒತ್ತಾಯಿಸಿದರು.

ವಕೀಲ ಹುಡೇದ ಗುರುಬಸವರಾಜ, ತಾಪಂ ಮಾಜಿ ಸದಸ್ಯ ದೇವೆಂದ್ರ, ವಾಲ್ಮೀಕಿ ಸಂಘದ ತಾಲೂಕು ತಾಲೂಕಧ್ಯಕ್ಷ ವೆಂಕೋಬಪ್ಪ, ಮೈಲಾರ ಶಿವಕುಮಾರ್ ಇತರರು ಇದ್ದರು.

# ಬೆಳೆ ವಿಮೆ ಯೋಜನೆಗೆ ನೋಂದಾಯಿಸಿಕೊಳ್ಳಿ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಪ್ರಸ್ತಕ ಸಾಲಿನ ಮುಂಗಾರು ಹಂಗಾಮು ಅವಧಿಗೆ ಮರು ವಿನ್ಯಾಸಗೊಳಿ ಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (ಆರ್‌ಡಬ್ಲ್ಯೂಬಿಸಿಐಎಸ್) ಯ ನೋಂದಣಿ ಪ್ರಕ್ರಿಯೆಯನ್ನು ಆ.16 ರ ವರೆಗೆ ವಿಸ್ತರಿಸಲಾಗಿದ್ದು, ಅರ್ಹ ರೈತರು ವಿಮೆಗೆ ನೋಂದಾಯಿಸಿಕೊಳ್ಳಬಹುದು ಎಂದು ತೋಟಗಾರಿಕೆ ಉಪನಿರ್ದೇಶಕ ಸಂತೋಷ ಸಪ್ಪಂಡಿ ತಿಳಿಸಿದ್ದಾರೆ.

ಪ್ರಕೃತಿ ವಿಕೋಪಗಳಾದ ಆಲಿಕಲ್ಲು ಮಳೆ, ಭೂಕುಸಿತ ಮತ್ತು ಬೆಳೆ ಮುಳುಗಡೆ, ಗುಡುಗು ಮಿಂಚುಗಳಿಂದ ಬೆಳೆಗಳಿಗೆ ಬೆಂಕಿ ಅವಘಡ ಇತ್ಯಾದಿ ಕಾರಣಗಳಿಂದ ಸಂಭವಿಸಬಹುದಾದ ಬೆಳೆಹಾನಿಯನ್ನು ವೈಯಕ್ತಿಕವಾಗಿ ನಿರ್ಧರಿಸಿ ಬೆಳೆ ನಷ್ಟದ ಪರಿಹಾರ ನೀಡಲಾಗುವುದು.

**ವಿಮಾ ಕಂಪನಿ:** ಕೆಎಸ್‌ಹೆಚ್‌ಎಂಎ ವಿಮಾ ಕಂಪನಿಯಾಗಿದ್ದು, ದಾಳಿಂಬೆ ಬೆಳೆ ವಿಮಾ ಯೋಜನೆಯಡಿ ಒಳಪಡುವ ಬೆಳೆಯಾಗಿದೆ.

ಬಳ್ಳಾರಿ, ಕಂಪ್ಲಿ, ಕುರುಗೋಡು, ಸಿರುಗುಪ್ಪ, ಸಂಡೂರು ತಾಲ್ಲೂಕುಗಳ ಎಲ್ಲಾ ಗ್ರಾಮ ಪಂಚಾಯಿತಿಗಳು ಪ್ರದೇಶಗಳಾಗಿದ್ದು, ಪ್ರತಿ ಹೆಕ್ಟರ್‌ಗೆ ವಿಮಾ ಮೊತ್ತ 1 ಲಕ್ಷ 27 ಸಾವಿರ ಹಾಗೂ ರೈತರು ಪಾವತಿಸಬೇಕಾದ ವಿಮಾ ಕಂತಿನ ದರ ರೂ.6,350 ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ, ಕಂಪ್ಲಿ ಮತ್ತು ಕುರುಗೋಡು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ(ಜಿಪಂ) ದೂ: 08392–278177 ಹಾಗೂ ಮೊ.94813–05830, ಸಂಡೂರು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ (ಜಿಪಂ) ದೂ:08395–260389, ಮೊ.97409–34208, ಕಂಪ್ಲಿ ಮತ್ತು ಸಿರುಗುಪ್ಪದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ (ಜಿಪಂ) ದೂ:08396–222066 ಹಾಗೂ ಮೊ.9916794371 ಗೆ ಸಂಪರ್ಕಿಸಬಹುದು.

# ಆ.13 ರಂದು ಪಿಂಚಣಿ ಅದಾಲತ್ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ

ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿ ದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಆ.13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ಕೆ. ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.

ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದು ಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿ ಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ–ಮೇಲ್ ಮೂಲಕ ಪಿ.ಪಿ.ಓ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪವ ಹಾಗೂ ಇತ್ಯಾದಿಗಳನ್ನು ಆ.12 ರೊಳಗಾಗಿ ತಿಳಿಸಬಹುದು. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08392–268943 ಗೆ ಸಂಪರ್ಕಿಸಿ.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

## ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

**ಮುಂದುವರೆದ ಭಾಗ**

ನಕ್ಷಾ ವಿಧಾನದಿಂದ ಪರಿಹಾರ ಕಂಡುಹಿಡಿಯುವುದು

ಉದಾ:1) $2x + y = 6$

$2x - y = 2$


ಪರಿಹಾರ :

$2x + y = 6$

| | | | |
|---|---|---|---|
| x | 0 | 3 | 1 |
| y | 6 | 0 | 4 |

ಪರಿಹಾ :$2x - y = 2$

| | | | |
|---|---|---|---|
| x | 0 | 1 | 2 |
| y | –2 | 0 | 2 |




ಉದಾ : 2)

ನೀವು ಪ್ರಯತ್ನಿಸಿ $x - y = -1$

$3x + 2y = 12$

ಪರಿಹಾರ : $x - y = -1$

| | | | |
|---|---|---|---|
| x | 0 | –1 | 1 |
| y | 1 | 0 | 2 |

ಪರಿಹಾರ : $3x + 2y = 12$

| | | | |
|---|---|---|---|
| x | 0 | 4 | 2 |
| y | 6 | 0 | 3 |

ಆದೇಶ ವಿಧಾನದಿಂದ ಪರಿಹಾರ ಕಂಡುಹಿಡಿಯುವುದು

ಉದಾ : $2x + y = 14$ ---------(1)

$2x + y = 16$ ---------(2)

ಪರಿಹಾರ : ಯಾವುದಾದರೊಂದು ಸಮೀಕರಣವನ್ನು ಆಯ್ದುಕೊಂಡು ಒಂದು ಚರಾಕ್ಷರವನ್ನು ಇನ್ನೊಂದರ ರೂಪದಲ್ಲಿ ವ್ಯಕ್ತಪಡಿಸಿ

$2x + y = 14$

$y = 14 - 2x$ ----------(3)

ನಂತರ ಸಮೀಕರಣ(3) ನ್ನು (2) ರಲ್ಲಿ (ಅಂದರೆ y ಬೆಲೆಯನ್ನು ಆಯ್ಕೆ ಮಾಡಿಕೊಳ್ಳದಿರುವ ಸಮೀಕರಣದಲ್ಲಿ) ಆದೇಶಿಸಿ

$x + 2y = 16$
$x + 2(14 - 2x) = 16$
$x + 28 - 4x = 16$
$-3x = 16 - 28$
$-3x = -12$
$x = 4$ ------------(4)

ನಂತರ (4) ನ್ನು (3) ರಲ್ಲಿ ಆದೇಶಿಸಿ

$y = 14 - 2x$
$y = 14 - 2(4)$
$y = 14 - 8$
$y = 6$

**ವರ್ಜಿಸುವ ವಿಧಾನದಿಂದ ಬಿಡಿಸಿ.**

$2x + y = 8$ -----------(1)
$x - y = 1$ -----------(2)

ಪರಿಹಾರ (1) + (2) ------------→

$2x + y = 8$
$x - y = 1$
$3x = 9$
**$x = 3$** -----------------(3)

ಸಮೀಕರಣ(3) ನ್ನು (2) ರಲ್ಲಿ ಆದೇಶಿಸಿ (ಯಾವುದೇ ಸಮೀಕರಣದಲ್ಲಿ ಆದೇಶಿಸಬಹುದು.

$x - y = 1$
$3 - y = 1$
$3 - 1 = y$
**$y = 2$**

ಅದೇ ರೀತಿಈ ಕೆಳಗಿನ ಸಮೀಕರಣಗಳನ್ನು ಮೇಲಿನ ಮೂರು ವಿಧಾನಗಳಲ್ಲಿ ಪ್ರಯತ್ನಿಸಿ. ನಕ್ಷಾ ವಿಧಾನ ಮತ್ತು ವರ್ಜಿಸುವ ವಿಧಾನ ಪ್ರತಿ ವರ್ಷ ಬಂದೇ ಬರುತ್ತವೆ

2) $3x + y = 5$ ಮತ್ತು $4x - 3y = 1$

3) $x + y = 5$ ಮತ್ತು $2x - 3y = 5$

4) $2x + y = 6$ ಮತ್ತು $2x - y = 2$

ಮಾರ್ಗದರ್ಶಿ ಶಿಕ್ಷಕರು : **ಎಸ್.ಮಹಂತೇಶ್,** ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಬಸರಕೋಡು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055